ವಾರ್ಷಿಕ ಚಂದಾ:
ಸ್ಥಳೀಯರಿಗೆ
1 ವರ್ಷಕ್ಕೆ ರೂ. 6-00
6 ತಿಂಗಳಿಗೆ ರೂ. 3-00
ಪರಸ್ಥಳೀಯರಿಗೆ
1 ವರ್ಷಕ್ಕೆ ರೂ. 7-00
6 ತಿಂಗಳಿಗೆ ರೂ. 3-50

ಪ್ರಭಾತ

ಬೆಲೆ: 12 ನ. ಪೈಸೆ.

ಸಂಪುಟ: ೨೮. ಸಂಚಿಕೆ: ೨೯. 26—8—1962 Vol. XXVIII. No. 29.

ನಗರಸಭಾ ಚುನಾವಣೆ: ರಾಜಕೀಯ ಪಕ್ಷಗಳ ಸಿದ್ಧತೆ.

ಮಂಗಳೂರು ಮತ್ತು ಉಡುಪಿ ನಗರ ಸಭೆಗಳಿಗೆ ಚುನಾವಣೆಗಳು ಇದೇ ಬರುವ ಅಕ್ಟೋಬರ ತಿಂಗಳಲ್ಲಿ ಜರಗುವುವು. ರಾಜಕೀಯ ಪಕ್ಷಗಳು, ಎಂದಿನಂತೆ, ಈ ರಣಾಕಳಕ್ಕೆ ದುಮುಕುವುವು.

ಮಂಗಳೂರಲ್ಲಿ, ಮೂವತ್ತಾರು ಸ್ಥಾನಗಳಲ್ಲೂ ಹುರಿಯಾಳುಗಳನ್ನು ನಿಲ್ಲಿಸುವ ಪಕ್ಷವು, ಈ ಬಾರಿಯೂ, ಕೊಂಗ್ರೆಸ್ ಒಂದೇ.

ಚುನಾವಣೆಗಳಿಗೆ ಹುರಿಯಾಳುಗಳ ಆಯ್ಕೆ, ಪ್ರಚಾರ ಮುಂತಾಗಿ ಯಾವತ್ತೂ ಕಾರ್ಯ ನಿರ್ವಹಣೆಗೆ, ಈಗಿನ ನಗರ ಸಭಾಧಿಪತಿ ಶ್ರೀ। ಮಣೇಲ ಶ್ರೀನಿವಾಸ ನಾಯ್ಕರು ಸಂಚಾಲಕರಾಗುಳ್ಳ ಒಂದು ಸಮಿತಿಯು ರಚಿಸಲ್ಪಟ್ಟಿದ್ದು, ಸಮಿತಿಯು ಅಗಲೇ ಕಾರ್ಯಕ್ಕೆ ತೊಡಗಿದೆ. ಸಮಿತಿಯಲ್ಲಿ ಶ್ರೀ। ಕೆ. ಸೂರ್ಯನಾರಾಯಣ ಅಡಿಗ, ಶ್ರೀ। ಕೆ. ಕೆ. ಶೆಟ್ಟಿ, ಶ್ರೀ। ಬಿ ನಾರಾಯಣ ನಾಯ್ಕ ಮತ್ತು ಶ್ರೀ। ಕೆ. ವಿಶ್ವನಾಥ ಕಾಮತರವರು ಇರುವರು.

ಈ ಬಾರಿ, ರಾಜಕೀಯ ಪಕ್ಷಗಳ ಪೈಕಿ, ಕಮ್ಯೂನಿಸ್ಟ ಪಕ್ಷವೇ ಪ್ರಬಲ ಸ್ಪರ್ಧೆ ನೀಡುವಂತಿದೆ. ಸ್ವತಂತ್ರ ಪಕ್ಷ ಮತ್ತು ಜನಸಂಘದ ಸ್ಪರ್ಧೆ ಇರುವುದಾದರೂ, ಸಂಖ್ಯಾಮಾನದಿಂದ ಅವು ಕಮ್ಯೂನಿಸ್ಟರಷ್ಟು ಹುರಿಯಾಳುಗಳನ್ನು ನಿಲ್ಲಿಸುವುವೋ ಹೇಳಬರುವುದಿಲ್ಲ. ಪಕ್ಷರಹಿತ ಸ್ವತಂತ್ರರೂ ಈ ಬಾರಿ ಕಲವು ವಾರ್ಡುಗಳಲ್ಲಿ ಸ್ಪರ್ಧಿಸುವುದರಲ್ಲಿ ಅನುಮಾನವಿಲ್ಲ. ಆದರೆ, ಎಲ್ಲ ವಾರ್ಡುಗಳಲ್ಲೂ ಸ್ಥಾನಾರ್ಥಿಗಳನ್ನು, ಕೊಂಗ್ರೆಸ್ ಹೊರತು ಮಿಕ್ಕ ಯಾವ ಪಕ್ಷವೂ ನಿಲ್ಲಿಸುವಂತಿಲ್ಲ.

ಇಂದಿನ ನಗರಸಭೆಯಲ್ಲಿರುವ ಹದಿನೆಂಟು ಕೊಂಗ್ರೆಸ್ ಪಕ್ಷೀಯ ಸದಸ್ಯರಲ್ಲಿ, ಅರೆವಾಸಿಯಷ್ಟು ಮಂದಿ, ಚುನಾವಣೆಗೆ ನಿಲ್ಲಲು ಇಚ್ಛಿಸುವುದಿಲ್ಲವೆಂದು ಕೇಳಬರುತ್ತದೆ. ಶ್ರೀ। ಜಿ. ಸೋಮಶೇಖರರಾವ್, ಶ್ರೀ। ಎಮ್. ರಮಾನಾಥ, ಶ್ರೀ। ಪಿ. ಎಫ್. ರೊಡ್ರಿಗ್ಸ್, ಶ್ರೀ। ಎಮ್. ರಾಮರಾಜ ಕಿಣಿ, ಶ್ರೀ। ಪಿ. ಅಚ್ಚುತ ಪ್ರಭು ಮತ್ತು ಶ್ರೀಮತಿ ಒಕ್ಸೀವಿಯಾ ಅಲ್ಬುಕರ್ಕ ಇವರು, ಹೊಸ ಉಮೇದ್ವಾರಿಗಳಿಗೆ ತಮ್ಮ ಸ್ಥಾನಗಳನ್ನು ಬರಿದುಮಾಡಿಕೊಡುವಂತಿದೆ. ನಗರ ಸಭಾಧಿಪತಿ ಶ್ರೀ। ಮಣೇಲ ಶ್ರೀನಿವಾಸ ನಾಯ್ಕರವರು ಮೂರು ತಿಂಗಳ ಹಿಂದೇ, ಪತ್ರಿಕಾಪ್ರತಿನಿಧಿಗಳ ಮುಂದೆ, ತಾವು ಮುಂದಿನ ಚುನಾವಣೆಗೆ ನಿಲ್ಲುವುದಿಲ್ಲವಾಗಿ ಹೇಳಿದ್ದರು. ನಗರಸಭೆಯ ಅತ್ಯಂತ ಹಳೆಯ ಕೌನ್ಸಿಲರ್ ಶ್ರೀ। ಜೆ. ಬಿ. ಮಚಾಡೋರವರೂ ಅನಾರೋಗ್ಯದ ಕಾರಣದಿಂದ ನಿಲ್ಲುವುದಿಲ್ಲ.

ದೇರೆಬೈಲು I, ಬಿಜೈ, ಕುದ್ರೋಳಿ, ಮಣ್ಣಗುಡ್ಡೆ, ಮಾರ್ಕೆಟ್, ಜೋಳಾರ, ಫಳ್ನೀರು, ಡೊಂಗರಕೇರಿ— ಈ ವಾರ್ಡುಗಳಲ್ಲಿ ಕೊಂಗ್ರೆಸ್ಸು ಈ ಬಾರಿ ಹೊಸಬರನ್ನು ನಿಲ್ಲಿಸುವಂತೆ ತೋರುತ್ತದೆ. ಆ ವಾರ್ಡುಗಳಿಗೆ ಇಷ್ಟರೊಳಗೇ ಕೆಲವರ ಹೆಸರುಗಳು ಕೇಳಬರುತ್ತಿವೆಯಾದರೂ, ಕೆಲವು ಬದಲಾವಣೆಗಳೂ ಸಾಧ್ಯವಿರಬಹುದು. ಕೊಂಗ್ರೆಸ್ ಟಿಕೇಟಿಗಾಗಿ ಅರ್ಜಿಗಳು ಈ ತಿಂಗಳಾಂತ್ಯದ ವರೆಗೆ ಸ್ವೀಕರಿಸಲ್ಪಡುವುವು. ಅಂತಿಮ ನಿರ್ಧಾರವು ಆ ಮೇಲೆ ಒಂದೆರಡು ವಾರಗಳಲ್ಲಿ ಹೊರಬೀಳುವದು.

ಪ್ರಬಲ ಸ್ಪರ್ಧೆಯನ್ನು ಪ್ರತೀಕ್ಷಿಸುವ ಕೆಲವು ವಾರ್ಡುಗಳಲ್ಲಿ ಕೊಂಗ್ರೆಸ್ಸು, ಈ ಬಾರಿ ಹೊಸಬರನ್ನೆ ಆರಿಸಬೇಕಾಗಿದೆ. ಅನ್ವೇಷಣೆಯೂ ನಡೆದಿದೆ.

ಕಳೆದ ಚುನಾವಣೆಗಳಲ್ಲಿ ಎಂಟು ಸ್ಥಾನಗಳನ್ನು ಗೆದ್ದ ಕಮ್ಯೂನಿಸ್ಟರು ಈ ಬಾರಿ ಮತ್ತೆರಡನ್ನು ಕೂಡಿಸಿಕೊಳ್ಳುವ ಯತ್ನದಲ್ಲಿದ್ದಾರೆ. ಕಮ್ಯೂನಿಸ್ಟರು ಕಳೆದ ಬಾರಿ ಪ್ರಬಲ ವಿರೋಧಪಕ್ಷ ರಚಿಸುವಲ್ಲಿ ಸಮರ್ಥರಾದವರು. ಈ ಬಾರಿಯೂ,—

[3ನೇ ಪುಟಕ್ಕೆ ಮುಂದುವರಿದಿದೆ]

28TH YEAR OF PUBLICATION. PHONE 728 ಬೆಲೆ: 12 ನ. ಪೈಸೆ

PRABHAT ✻ KANNADA WEEKLY ✻ MANGALORE

ಲೇಖಾಂಕ ೬೬.

ಮಹಾಭಾರತ ಕಥಾಮೃತ

(ಲೇಖಕ: ಶ್ರೀ। ಕೋ.ಶ.ಕಾರಂತ, ಬಿ.ಎ.,ಬಿ.ಎಲ್., ಎಡ್ವೊಕೇಟ್, ಮಂಗಳೂರು.)

ನಳೋಪಾಖ್ಯಾನ

[ತಾ. 19—8—1962ನೇ ಸಂಚಿಕೆಯಿಂದ ಮುಂದುವರಿದುದು]

ಕ್ವನತ್ವಂ ಕಿತವಚ್ಛಿತ್ತ್ವಾ
ವಸ್ತ್ರಾರ್ಧಂ ಪ್ರಸ್ಥಿತೋಮಮ ।
ಉತ್ಸೃಜ್ಯ ವಿಪಿನೇ
ಸುಪ್ತಾಮನುರಕ್ತಾಂ
ಪ್ರಿಯಾಂ ಪ್ರಿಯ
ಸಾವೈ ಯಥಾ ತ್ವಯಾದೃಷ್ಟಾ
ತಥಾಽಽಸ್ತೇ ತ್ವತ್ಪ್ರತೀಕ್ಷಿಣೀ ।
ದಹ್ಯಮಾನಾ ಭೃಶಂ
ಬಾಲಾ ವಸ್ತ್ರಾರ್ಧೇನಾಭಿಸ ಅವೃತಾ॥
೬೯-೩೭, ೩೮ ॥

ಜೂಜಾಡಿದ ಪ್ರಿಯನೇ! ನಾನುಟ್ಟ ಶೀರೆಯನ್ನು ಅರ್ಧ ಕತ್ತರಿಸಿ, ಪತಿಯಲ್ಲಿ ಅನುರಕ್ತಳಾದ ಪತ್ನಿಯನ್ನು ವನದಲ್ಲಿ ಮಲಗಿರುವಾಗ ತ್ಯಜಿಸಿ, ಕತ್ತರಿಸಿದ ಅರ್ಧ ಶೀರೆಯನ್ನುಟ್ಟು ಎಲ್ಲಿಗೆ ಹೋಗಿರುವಿ? ಆ ರಾತ್ರಿ ನೀನು ತ್ಯಜಿಸಿದಾಗಿದ್ದ ಅವಸ್ಥೆಯಲ್ಲಿಯೇ ಇದ್ದು ನಿನ್ನ ಆಗಮನ ನಿರೀಕ್ಷಣೆಯಲ್ಲಿರುವಳು. ಆ ಅರ್ಧ ಶೀರೆಯನ್ನೇ ತೊಟ್ಟು ಆ ಯುವತಿಯು ವಿರಾಗ್ನಿಯಿಂದ ನಿರಂತರ ದಹಿಸಲ್ಪಡುತ್ತಿದ್ದಾಳೆ.

ತಸ್ಯಾ ರುದತ್ಯಾಃ ಸತತಂ
ತೇನ ಶೋಕೇನ ಪಾರ್ಥಿವ ।
ಪ್ರಸಾದಂ ಕುರು ವೈ ವೀರ
ಪ್ರತಿವಾಕ್ಯಂ ದದಸ್ವ ಚ ॥ ೩೯

"ವೀರ ಭೂಪಾಲ! ಸದಾ ನಿನ್ನ ವಿರಹ ಶೋಕದಿಂದ ಅಳುತ್ತಿರುವ ನಿನ್ನ ಈ ಧರ್ಮಪತ್ನಿಯ ಮೇಲೆ ಕೃಪೆಯನ್ನಿಡು. ನನ್ನ ಮಾತಿಗೆ ಪ್ರತ್ಯುತ್ತರವನ್ನು ದಯಪಾಲಿಸು."

ಈ ಪ್ರಕಾರ ನೀವು ಈ ಮಾತನ್ನು ಉದ್ಘೋಷಿಸುವ ಕೃಪೆಯನ್ನು ನೀಡಬೇಕು. "ಗಾಳಿ ಬೀಸಿತೆಂದರೆ ಬೆಂಕಿಯು ಸಮಗ್ರವನ್ನು ಸುಡಬಲ್ಲುದು. ಹಾಗೆಯೇ ಪತಿಯ ವಿರಹವು ನನ್ನನ್ನು ದಹಿಸುತ್ತಿದೆ. ನೀವು ಕುಲೀನ ವಿದ್ವನ್ಮಣಿಗಳಾಗಿರುವಿರಿ! ಈ ಮಾತನ್ನು ಕೇಳಿ ಯಾರಾದರೂ ಏನನ್ನಾದರೂ ಉತ್ತರವನ್ನಿತ್ತರೆ ಅದನ್ನು ನೆನಪಿನಲ್ಲಿಟ್ಟು ನನಗೆ ಬಂದು ತಿಳಿಸಬೇಕು. ಇವು ನನ್ನ ಮಾತೆಂದು ಯಾರಿಗೂ ನೀವು ತಿಳಿಸಬಾರದು. ಉತ್ತರ ಸಿಕ್ಕಿದೊಡನೆ ಶೀಘ್ರವಾಗಿ ಇಲ್ಲಿಗೆ ಬಂದು ಅರುಹಬೇಕು. ಉತ್ತರವನ್ನೀಯುವವನು ಧನವಂತನೇ? ಅಥವಾ ನಿರ್ಧನನೆ, ಸಮರ್ಥನೆ ಎಂಬುದನ್ನು ನೀವು ವಿಚಾರಿಸಿ ಬರಬೇಕು" ಎಂದು ಆ ರಾಜಕುಮಾರಿಯು ಬ್ರಾಹ್ಮಣರಿಗೆ ರಹಸ್ಯ ಸಂದೇಶವನ್ನಿತ್ತಳು.

ನಳನನ್ನು ಹುಡುಕುವುದಕ್ಕಾಗಿ ಬ್ರಾಹ್ಮಣರು ದೇಶದೇಶಾಂತರಗಳಲ್ಲಿ ಸಂಚರಿಸುತ್ತ ದಮಯಂತಿಯ ವಾಕ್ಯಗಳನ್ನು ಉದ್ಘೋಷಿಸಿದರು. ಎಲ್ಲಿಯೂ ನಳರಾಯನ ಸಮಾಚಾರವು ಸಿಗಲಿಲ್ಲ. ಯಾರೂ ಈ ಮಾತುಗಳಿಗೆ ಉತ್ತರವನ್ನು ಹೇಳಲಿಲ್ಲ. ಆದರೂ ಅವರು ತಮ್ಮ ಕರ್ತವ್ಯನಿಷ್ಠರಾಗಿ ಸಂಚರಿಸುತ್ತಿದ್ದರು.

ಅವರಲ್ಲೊಬ್ಬನಾದ ಪರ್ಣಾದನೆಂಬ ಬ್ರಾಹ್ಮಣನು ದಮಯಂತಿಯ ಬಳಿ ಸಾರ್ದು ಈ ತೆರನಾಗಿ ವಿಜ್ಞಾಪಿಸಿದನು: "ಅಮ್ಮಾ! ಅನೇಕ ರಾಜ್ಯಗಳನ್ನು ಸುತ್ತಾಡಿದೆನು. ಎಲ್ಲಿಯೂ ಯಾರ ಉತ್ತರವೂ ಸಿಗಲಿಲ್ಲ. ನಳ ಭೂಪಾಲನ ಕುರುಹು ದೊರೆಯಲಿಲ್ಲ. ಅಯೋಧ್ಯಾ ರಾಜ್ಯವನ್ನಾಳುತ್ತಿರುವ ಋತುಪರ್ಣ ಭೂಪಾಲನ ಆಸ್ಥಾನವನ್ನು ಪ್ರವೇಶಿಸಿ ನಿಮ್ಮ ವಾಕ್ಯಗಳನ್ನು ಪಠಿಸಿದೆನು. ರಾಜ ಋತುಪರ್ಣರು ಈ ವಾಕ್ಯಗಳನ್ನು ಕೇಳಿ ಏನೂ ಹೇಳಲಿಲ್ಲ. ಆಸ್ಥಾನದಲ್ಲಿದ್ದವರಲ್ಲಿ ಯಾರೊಬ್ಬರೂ ಉತ್ತರವನ್ನೀಯಲಿಲ್ಲ.

ಆದರೆ, ಮಾತೇ! ನಾನು ರಾಜರಿಂದ ಅಪ್ಪಣೆಪಡೆದು ಹೊರಬರುವಾಗ ವಿಕಾರ ರೂಪಿಯಾದ ಬಾಹುಕನೆಂಬ ಓರ್ವನು ನನ್ನನು ಏಕಾಂತ ಸ್ಥಳಕ್ಕೆ ಕರಕೊಂಡು ಹೋಗಿ ನಿಮ್ಮ ವಾಕ್ಯಗಳಿಗೆ ಉತ್ತರವನ್ನು ಹೇಳಿದನು. ಅವನು ಮಹಾರಾಜ ಋತುಪರ್ಣನ ಸಾರಥಿಯಾಗಿರುವನು. ಅಶ್ವ ವಿದ್ಯೆಯಲ್ಲಿ ಬಹಳ ನಿಪುಣನಂತೆ. ದೀರ್ಘ ಶ್ವಾಸವನ್ನು ಬಿಡುತ್ತ, ಕುಶಲ ಸಮಾಚಾರವನ್ನು ಕೇಳುತ್ತ ಈ ಉತ್ತರವನ್ನಿತ್ತನು.

ವೈಷಮ್ಯಮಪಿ ಸಂಪ್ರಾಪ್ತಾ
ಗೋಪಾಯಂತಿ ಕುಲಸ್ತ್ರೀಯಃ ।
ಆತ್ಮಾನಾತ್ಮಾನಾ ಸತ್ಯೋ
ಜತಃ ಸ್ವರ್ಗೋ ನ ಸಂಶಯಃ
॥ ೭೦-೮ ॥

ಉತ್ತಮ ಸ್ತ್ರೀಯು ಭಯಂಕರ ಸಂಕಟವು ಬಂದೊದಗಿದರೂ, ತಮ್ಮ ಆತ್ಮಬಲದಿಂದ ರಕ್ಷಿಸಿಕೊಳ್ಳುವರು. ಅವರು ಸತ್ಯ ಮತ್ತು ಸ್ವರ್ಗ ಇವರೆಡರಲ್ಲಿಯೂ ವಿಜಯಿಗಳಾಗುವರು. ಇದರಲ್ಲಿ ಏನೂ ಸಂಶಯವಿಲ್ಲವು.

ರಹಿತಾ ಭರ್ತೃಭಿಶ್ಚೈವ
ನ ಕುಪ್ಯಂತಿ ಕದಾಚನ ।
ಪ್ರಾಣಾಂಶ್ಚಾರಿತ್ರ ಕವಚಾನ್
ಧಾರಯಂತಿ ವರಸ್ತ್ರೀಯಃ ॥ ೯ ॥

ಇಂತಹ ಶ್ರೇಷ್ಠ ನಾರಿಮಣಿಗಳು ಪತಿಗಳಿಂದ ತ್ಯಜಿಸಲ್ಪಟ್ಟರೂ ಎಂದೂ ಅವರ ಮೇಲೆ ಕೋಪವನ್ನು ತಾಳುವುದಿಲ್ಲ. ಸದಾಚಾರ ಎಂಬ ಕವಚವನ್ನು ಧರಿಸಿ ತಮ್ಮ ಪ್ರಾಣವನ್ನು ಧಾರಣೆಮಾಡಿಕೊಂಡಿರುವರು. ಆದರೆ ಪುರುಷರು ಸಂಕಟ ಬಂದೊದಗಿದಾಗ ಸುಖಸಾಧನಗಳಿಂದ ವಂಚಿತರಾದಾಗ ಕಿಂಕರ್ತವ್ಯ ಮೂಢರಾಗುವರು. ಇಂತಹ ಪರಿಸ್ಥಿತಿಯಲ್ಲಿ ಪತಿಯು ಪತ್ನಿಯನ್ನು ಪರಿತ್ಯಾಗ ಮಾಡಿದರೂ ಪತ್ನಿಯು ಕ್ರೋಧ ಮಾಡಬಾರದು. ರಾಜ್ಯ ಮತ್ತು ಲಕ್ಷ್ಮಿಯನ್ನು ಕಳಕೊಂಡು ಹಸಿವೆ ತೃಷೆಯಿಂದ ಕಂಗೆಟ್ಟು ವಿಚಾರಶೂನ್ಯನಾಗಿ ಆಪತ್ತುಗಳ ಸಾಗರದಲ್ಲಿ ಮುಳುಗಿರುವ ಪತಿಯನ್ನು ಪತ್ನಿಯೂ ಕ್ಷಮಿಸಬೇಕಾಗಿದೆ" ಎಂದು ನುಡಿದನು.

ಬಾಹುಕನ ಈ ದಿವ್ಯ ಉತ್ತರವನ್ನು ಕೇಳಿ ನಿಮ್ಮಡಿಗೆ ಧಾವಿಸಿಬಂದಿರುವೆನು" ಎಂದು ವಿಜ್ಞಾಪಿಸಿದನು. ಪರ್ಣಾದನ ಆ ಮಾತುಗಳನ್ನು ಕೇಳಿ ದಮಯಂತಿಯ ನೇತ್ರಗಳಿಂದ ಅಸ್ರುಧಾರೆಯು ಸುರಿಯಿತು. ಏಕಾಂತವನ್ನು ಸೇರಿ ಮಾತೆಯೊಡನೆ ಈ ಪ್ರಕಾರ ನಿವೇದಿಸಿದಳು:

"ಮಾತೆ! ನಾನು ವಿಪ್ರಶ್ರೇಷ್ಠನಾದ ಸುದೇವನನ್ನು ರಹಸ್ಯ ಕಾರ್ಯದಲ್ಲಿ ನಿಯೋಜಿಸುತ್ತೇನೆ. ನಮ್ಮ ಜನಕನಿಗೆ ಈ ವಿಚಾರವು ತಿಳಿಯಬಾರದು. ಪತಿಯ ಅನ್ವೇಷಣವಾಗದೆ ಹೃದಯಕ್ಕೆ ನೆಮ್ಮದಿ ಇಲ್ಲವಮ್ಮಾ."

ದಮಯಂತಿಯು ಆ ಬಳಿಕ ಪರ್ಣಾದನಿಗೆ ತಕ್ಕ ಸಂಭಾವನೆಯನ್ನು ಕೊಟ್ಟು ಕಳುಹಿಸಿದಳು.

ಇತ್ತ ಸುದೇವನನ್ನು ಏಕಾಂತದಲ್ಲಿ ಕರೆಯಿಸಿಕೊಂಡು ಪತಿಯ ಅನ್ವೇಷಣ ಕಾರ್ಯದಲ್ಲಿ ದಮಯಂತಿಯು ಅತ್ಯಂತ ರಹಸ್ಯವಾಗಿ, ಸುದೇವ ವಿಪ್ರೋತ್ತಮ! ನೀವು ಗರುಡನಂತೆ ಅಯೋಧ್ಯಾ ನಗರಕ್ಕೆ ಹಾರಿಹೋಗಿ, ಋತುಪರ್ಣರಾಜರೊಡನೆ ಈ ಪ್ರಕಾರ ವಿಜ್ಞಾಪಿಸಬೇಕು: "ಭೀಮಕುಮಾರಿ ದಮಯಂತಿಗೆ ಪುನಃ ಸ್ವಯಂವರ ಜರಗುವುದು. ಭೂಮಂಡಲದ ರಾಜರು, ರಾಜಕುಮಾರರು ಆಗಮಿಸುವರು. ನಾಳೆಯೇ ಆ ಸ್ವಯಂವರವು ಜರಗುವುದು. ನಿಮ್ಮಿಂದ ಸಾಧ್ಯವಾದರೆ ನೀವು ಪುಣ್ಯಶಾಲಿಗಳೆಂದು ತಿಳಿಯುವೆನು. ನಾಳೆ ಸೂರ್ಯೋದಯವೇ ಪತಿವರಣೆಯ ಸುಮುಹೂರ್ತವೆಂದು ನಿಶ್ಚಯಿಸಿದ್ದಾರೆ. ವೀರನರೇಂದ್ರ ನಳನು ಜೀವಂತನಿರಲಿ ಮೃತ್ಯುವಶನಾಗಿರಲಿ ಪುನಃ ಸ್ವಯಂವರವು ಜರಗುವುದು ನಿಶ್ಚಯ. ಶುಭಸ್ಯ ಶೀಘ್ರಂ" ಎಂದು ಹೇಳಿ ಕಳುಹಿಸಿದಳು.

—೦—

ವಾರ್ಷಿಕೋತ್ಸವ

ಕುಂದಾಪುರ ಎಡ್ವರ್ಡ್ ಮೆಮೊರಿಯಲ್ ಕ್ಲಬ್ಬಿನ ವಾರ್ಷಿಕೋತ್ಸವವು ಕ್ಲಬ್ಬಿನ ಅಧ್ಯಕ್ಷ ಶ್ರೀ। ಎಸ್. ಎಸ್. ಕೊಳ್ಕೆಬೈಲ್‌ರವರ ಅಧ್ಯಕ್ಷತೆಯಲ್ಲಿ ಇತ್ತೀಚೆಗೆ ಜರಗಿತು.

ಪ್ರಭಾತ

ಸಂಪುಟ: ೨೮. ಸಂಚಿಕೆ: ೨೬. 26–8–1962 Vol. XXVIII. No.26.

"ಸಾವಿನ ಸಾಹುಕಾರರು"

"ಸಾವಿನ ಸಾಹುಕಾರರು" ಅಥವಾ "ಮರಣದ ವರ್ತಕರು" ಎಂದು, ಶ್ರೀ। ಎಚ್. ವಿ. ಕಾಮತರವರು, 'ಕೃತಕ ಔಷಧಗಳ ತಯಾರಕರನ್ನೂ, ಮಾರಾಟಗಾರರನ್ನೂ, ಕೆಲದಿನಗಳ ಹಿಂದೆ, ಲೋಕಸಭೆಯಲ್ಲಿ ಟೀಕಿಸಿದರು. ಇತ್ತೀಚೆಗೆ ಭಾರತದ ಮಹಾನಗರಗಳಲ್ಲಿ, ಔಷಧಿ ನಿಯಂತ್ರಣಾ ವಿಭಾಗದವರ ಯತ್ನದ ಫಲವಾಗಿ ಬೆಳಕಿಗೆ ಬಂದ—ಖೋಟಾ ಔಷಧಿಗಳ ಕುರಿತು ಲೋಕಸಭೆಯಲ್ಲಿ ಚರ್ಚೆ ನಡೆಯುವಾಗ, ಅನೇಕ ಸದಸ್ಯರು ಉಗ್ರವಾಗಿ ಟೀಕಿಸಿ ಮಾತನಾಡಿದ ಸಂದರ್ಭದಲ್ಲಿ, ಶ್ರೀ। ಕಾಮತರವರು, ಅಂಥ ಓಷಧಿಗಳ ವರ್ತಕರನ್ನು ಕುರಿತು ನಾಮಕರಣ ಮಾಡಿ, ಆ ಒಂದೇ ಹೆಸರಲ್ಲಿ ಈ ಮಾರಣಹೋಮದ ಕಳ್ಳಕೂಟವನ್ನು ಯಥಾರ್ಥವಾಗಿ ಟೀಕಿಸಿರುವರು.

ದ್ವಿತೀಯ ಜಾಗತಿಕ ಯುದ್ಧಾನಂತರ ಔಷಧಿಗಳೂ ಹೆಚ್ಚಿದುವು. ಬೇಡಿಕೆಯೂ ಹೆಚ್ಚಿತು. ಸ್ವಾತಂತ್ರ್ಯಾನಂತರ ಭಾರತವು, ಕೇವೊಂದು ಪ್ರಾಮುಖ್ಯ ಔಷಧಿಗಳನ್ನು ಇಲ್ಲೇ ತಯಾರಿಸತೊಡಗಿತು. ಚಿಕ್ಕ ದೊಡ್ಡ ಔಷಧಿ ತಯಾರಿ ಸಂಸ್ಥೆಗಳು ತಲೆಯೆತ್ತಿದುವು. ಎಲೋಪಥಿ ಔಷಧಗಳಿಗೆ ಬೇಡಿಕೆ ಹೆಚ್ಚಿದಂತೆ ಸಂಸ್ಥೆಗಳ ಸಂಖ್ಯೆಯೂ ಅಧಿಕವಾಯಿತು. ಇಂಥ ದೇಶೀ ಔಷಧಿಗಳಿಗಿಂತ ವಿದೇಶೀ ಔಷಧಿಗಳಿಗೇ ಹೆಚ್ಚು ಬೇಡಿಕೆಯಿರುವ ದೆಸೆಯಿಂದ, ವಿದೇಶೀ ಲೇಬಲುಗಳ ಹಿಂದೆ ಕೃತಕ ಔಷಧಿಗಳ ತಯಾರಿ ಮತ್ತು ವಿಕ್ರಯ ಆರಂಭವಾಯಿತು. ನ್ಯಾಯಾನ್ಯಾಯ, ಹಿತಾಹಿತ, ಭೂತದಯೆ ಯಾವುದೂ ಇಲ್ಲದೆ, ಲಾಭಬಡಕರು, ಅಡ್ಡಜಾತಿಯ ಸೃಷ್ಟಿಗೆ ತೊಡಗಿದರು; ಅದೇ ವರ್ಣದ ವರ್ತಕರಿಂದ ಪ್ರೋತ್ಸಾಹಪಡೆದರು; ಮತ್ತು ಇದರಿಂದ "ಕೋಳ" ಬೆಳೆಯಿತು— ಇಷ್ಟು ಮಾತುಗಳಲ್ಲೇ ಇದನ್ನು ಸಂಕ್ಷೇಪಿಸಿ ಹೇಳಿದರೆ ಸಾಕು, ಕೆಲವು ಸದಸ್ಯರೇ ಒತ್ತಾಯಿಸಿ, ತಂತಮ್ಮವರಿಗೆ (ಸಣ್ಣ ಪ್ರಮಾಣದ ಕೈಗಾರಿಕೆಯಾಗಿ?) ಔಷಧಿ ತಯಾರಿಗೆ ಸರಕಾರದ ಅನುಮತಿ ದೊರಕಿಸಿಕೊಟ್ಟರೆಂದು, ಲೋಕಸಭೆಯಲ್ಲಿ, ಸಚಿವರ ಕಡೆಯಿಂದೊಂದು ಅಪಾದನೆಯೋ ನೊಂದ ನುಡಿಯೋ, ಚರ್ಚಾಕಾಲದಲ್ಲಿ ಪ್ರಕಟವಾಗಿದೆ. ಇದು, ಸರಕಾರದ ಕಡೆಯಿಂದ ಒಂದು ಸಮರ್ಥರೀತಿಯ ಪ್ರತಿಪಾದನೆಯೂ ಅಲ್ಲ, 'ಕೆಲವು' ಸದಸ್ಯರ ಒತ್ತಾಯಕ್ಕೆ ಸೈಗುಟ್ಟುವ ಸರಕಾರದ ಸಾರಾಸಾರ ವಿವೇಚನಾಶಕ್ತಿ-ದೃಢತೆ-ಜಾಣತನಗಳಿಗೆ ಪುಷ್ಟಿಕರವೂ ಅಲ್ಲವೆಂದು ಸಾಮಾನ್ಯರಿಗೆ ಕೂಡ ಭಾಸವಾಗದಿರದು.

ಸರಕಾರವು, ತಡವಾಗಿಯಾದರೂ ಎಚ್ಚೆತ್ತು, ಈ "ಸಾವಿನ ಸಾಹುಕಾರ"ರನ್ನು ಬಯಲಿಗೆಳೆಯಲು ತೊಡಗಿದೆ ಮತ್ತು ಈ "ಕೋಳ"ಯನ್ನು ಕೊನೆಗೊಳಿಸುವ ನಿರ್ಧಾರಮಾಡಿದೆ ಎಂಬುದು ಸಮಾಧಾನಕರವಿದೆ. ಪ್ರಾಣದಾನದ ಒಂದು ವಸ್ತುವನ್ನು 'ಮರಣದಾನ'ದ ವಸ್ತುವಾಗಿ ಮಾರ್ಪಡಿಸಿ, ಕೆಲವು ರೂಪಾಯಿಗಳಿಗಾಗಿ ಸ್ವಜನಘಾತಕ್ಕೆ ತೊಡಗುವ ಈ ಕೃತ್ಯಕ್ಕೆ ಮಿಗಿಲಾದ ದುಷ್ಕೃತ್ಯ ಮತ್ತು ರಾಕ್ಷಸೀ ವ್ಯವಹಾರ ಇನ್ನೊಂದು ಇರಲಾರದು. ಪ್ರತ್ಯಕ್ಷ ಇದಿರು ನಿಂತು ಇರಿದು ಅಥವಾ ಹಿಸುಕಿ ಕೊಲ್ಲುವ ಕೊಲೆಗಾರನಿಗಿಂತ, ನಂಬಿಸಿ, ಬಹುಸಂಖ್ಯೆಯಲ್ಲಿ ಪ್ರಾಣ ತೆಗೆವ ಈ ಸಾಮೂಹಿಕ ಕೊಲೆಯು, ಕೇವಲ ಒಂದು ಸಾಮಾನ್ಯ ದುರ್ವ್ಯಾಪಾರದ ಮಟ್ಟದಲ್ಲಿರಿಸಲ್ಪಟ್ಟು ನೋಡಲ್ಪಡಲಾಗದು. ಎಡೆಬಿಡದೆ—ನಿರ್ದಾಕ್ಷಿಣ್ಯವಾಗಿ—ಪತ್ತೆಯ ಕಾರ್ಯವೂ ಬೇಕು, ಕಠಿನ ಶಿಕ್ಷೆಯೂ ಬೇಕು. ನಾವು, ಈ ಮೊದಲೊಮ್ಮೆ ಬರೆದಂತೆ, ಈ ವಿಭಾಗದಲ್ಲಿ ತಪ್ಪಿತಸ್ಥರನ್ನು ಬಯಲಿಗೆಳೆಯಲು ಡಾಕ್ಟರುಗಳು ತುಂಬ ಸಹಾಯಕರಾಗಬಹುದು.

ಜನತೆಗೆ, ಯಾವ ಔಷಧಿ ಸರಿಯಾದುದು— ಯಾವುದು ಕೃತಕ— ಎಂಬುದರ ವಿಷಯದಲ್ಲೀಗ ಸಂದೇಹವೂ ಕಳವಳವೂ ಉಂಟಾಗುವುದು ಸಹಜವಿದೆ. ಸರಕಾರವು ಹೆಚ್ಚಿನ ಪರಿಶ್ರಮ ತೋರಿ, ಸಮಾಧಾನಗೊಳಿಸಿ ಜನತೆಗೆ ತಿರಿಗಿ ವಿಶ್ವಾಸವುಂಟಾಗುವಂತೆ ಮಾಡುವುದೆಂದು ನಂಬುತ್ತೇವೆ.

—೦—

[1ನೇ ಪುಟದಿಂದ ಮುಂದುವರಿದುದು]

ಚುನಾವಣಾ ಪೈಪೋಟಿಗೆ ಕಮ್ಯೂನಿಸ್ಟರೊಡನೆ, ಒಂದೆರಡು ಪಕ್ಷಗಳು ಒಪ್ಪುವುದಿಲ್ಲವಾದರೂ, ಚುನಾವಣಾನಂತರ ವಿರೋಧ ಪಕ್ಷವು ಕಳೆದಬಾರಿಗಿಂತ ಅಬಲವಾಗಲಾರದು.

ಅವಿರೋಧ ಆಯ್ಕೆಗಳಿಗೆ ಈ ಬಾರಿ ಎಡೆಯಿರಲಾರದೆಂದು ತೋರುತ್ತದೆ.

ಕಳೆದ ಬಾರಿ, ಮೂವತ್ತಾರರಲ್ಲಿ ಹದಿನೆಂಟು ಸ್ಥಾನಗಳನ್ನು ಪಡೆದಿದ್ದ ಕೊಂಗ್ರೆಸ್ಸು, ಈ ಬಾರಿ ಹೆಚ್ಚು ಸ್ಥಾನಗಳನ್ನು ಗೆಲ್ಲುವ ಭರವಸೆಯಿಂದಿದೆ. ಆದರೆ, ಈ ಬಾರಿಯ ಸ್ಪರ್ಧೆಯು ತೀವ್ರವೇ ಇರುವುದು ಮತ್ತು ಕೊಂಗ್ರೆಸ್ಸು ಕಳೆದ ಬಾರಿಯಷ್ಟು ಸ್ಥಾನಗಳನ್ನಾದರೂ ಈ ಬಾರಿ ಪಡೆದರೆ ಅದೊಂದು ದೊಡ್ಡ ಯಶಸ್ಸೇ ಎನ್ನುವವರಿದ್ದಾರೆ.

ಧುರೀಣತ್ವದ ಪ್ರಶ್ನೆ ಅಸ್ಪಷ್ಟವಾಗಿ ಉಳಿದಿದೆ. ಒಂದೆರಡು ಅವಧಿಗಳಲ್ಲಿ ಕೌನ್ಸಿಲರರಾಗಿಯೂ, ಎರಡು ಬಾರಿ ನಗರಸಭಾಧಿಪತಿಗಳಾಗಿಯೂ ಯಶಸ್ವಿಯಾಗಿ ಕಾರ್ಯನಿರ್ವಹಿಸಿದ್ದ ಶ್ರೀ। ಕೆ. ಸೂರ್ಯನಾರಾಯಣ ಅಡಿಗರು, ಕಳೆದ ಬಾರಿ ಸ್ಪರ್ಧಿಸಲು ಇಚ್ಛಿಸಲಿಲ್ಲ. ಈ ಬಾರಿ ಅವರನ್ನು ನಗರಸಭೆಗೆ ತರಲು ಕೊಂಗ್ರೆಸ್ ವಲಯಗಳಲ್ಲಿ ಪ್ರಬಲೇಚ್ಛೆ ಇದ್ದಂತೆ ತೋರುತ್ತದೆ. ಶ್ರೀ। ಅಡಿಗರು ಒಪ್ಪಿದರೆ, ಅವರಿಗೇ ಧುರೀಣತ್ವ ಒಪ್ಪಿಸಲ್ಪಡುವುದೆಂದು ನಿಶ್ಚಯವಾಗಿ ಹೇಳಬಹುದು.

——

ಶ್ರೀಮತಿ ಕಲ್ಯಾಣಕ್ಕನವರ ವೈಕುಂಠ ಸಮಾರಾಧನೆ

ಮಂಗಳೂರಿನ ಪ್ರಸಿದ್ಧ ವ್ಯಾಪಾರಿಗಳಲ್ಲಿ ಒಬ್ಬರಾಗಿದ್ದ ಶ್ರೀ। ಶ್ರೀನಿವಾಸ ನಾಗಪ್ಪ ಚೂರ್ಯರ ಧರ್ಮಪತ್ನಿ ಶ್ರೀಮತಿ ಕಲ್ಯಾಣಿ ಯಾನೆ ಶ್ರೀದೇವಿ ಅಮ್ಮನವರು ಕಳೆದ ತಾ. 12ನೇ ರವಿವಾರ ಏಕಾದಶಿಯ ಪುಣ್ಯದಿನದಂದು ಡೊಂಗರಕೇರಿಯ ತಮ್ಮ ನಿವಾಸದಲ್ಲಿ ನಿಧನಹೊಂದಿದ್ದು, ಅವರ ವೈಕುಂಠ ಸಮಾರಾಧನೆಯು ತಾ. 24ರಂದು ವಿಶೇಷ ಸಂಭ್ರಮದಿಂದ ನೆರವೇರಿತು. ಶ್ರೀಮತಿಯವರು ತನ್ನ ಜೀವಿತ ಕಾಲದ ಹೆಚ್ಚಿನ ಸಮಯವನ್ನು ದೇವತಾರ್ಚನೆ, ಪರ್ವಕಾಲಾದಿಗಳ ಆಚರಣೆಗಳಲ್ಲೇ ಕಳೆದಿದ್ದು ಮಹಿಳಾ ಸಮಾಜದ ನೂರಾರು ಮಂದಿಗೆ ಪಾತ್ರರಾಗಿದ್ದು, ಅವರ ವೈಕುಂಠ ಸಮಾರಾಧನೆಯಲ್ಲಿ ಅಧಿಕ ಸಂಖ್ಯೆಯಲ್ಲಿ ಮುತ್ತೈದೆಯರು ಭಾಗವಹಿಸಿದ್ದರಲ್ಲದೆ ಬಂದರದ ಹಲವು ಆಢ್ಯ ಮಹನೀಯರೂ ಉಪಸ್ಥಿತರಿದ್ದರು. ಮಂಗಳೂರಿನ ಕರ್ನಾಟಕ ಲಲಿತ ಕಲಾ ಮಧುವನದ ಸಂಚಾಲಕ ಶ್ರೀ। ರಮಾನಂದ ಚೂರ್ಯರು ಶ್ರೀಮತಿಯವರ ದತ್ತಪುತ್ರರಿರುತ್ತಾರೆ.

——

ನಮ್ಮ ಜಿಲ್ಲೆ

ಪ್ರೊಹಿಬಿಷನ್ ಧಾಳಿ

ಬೈಂದೂರು ಪೋಲೀಸ್ ಸ್ಟೇಶನ್ ಸಬ್ ಇನ್ಸಪೆಕ್ಟರ್ ಶ್ರೀ। ಎ. ತ್ಯಾಂಪ್ಪಂಞಯರವರು ಪಾರ್ಟಿ ಸಮೇತ ಕುಂದಾಪುರ ತಾಲೂಕು ನಾಡಗ್ರಾಮದಲ್ಲಿ ಧಾಳಿ ನಡೆಸಿ ಶರಾಬು ಬೇಯಿಸುತ್ತಿದ್ದ ಭಟ್ಟಿಯನ್ನು ಪತ್ತೆಹಚ್ಚಿ 12 ಗೆಲನಿನಷ್ಟು ಹುಳಿರಸ, 18 ಬಾಟ್ಲಿ ಶರಾಬು ಮತ್ತು ಭಟ್ಟಿಯ ಉಪಕರಣಗಳನ್ನು ವಶಪಡಿಸಿ ಮುಂದಿನ ತನ್ನಿ ನಡೆಸುತ್ತಿರುವರಾಗಿ ತಿಳಿದುಬಂದಿದೆ.

ಮೊಸರುಕುಡಿಕೆ ಉತ್ಸವಗಳು

ಮಂಗಳೂರು ಅತ್ತಾವರ ಶ್ರೀಕೃಷ್ಣ ಜಯಂತ್ಯುತ್ಸವ ಸಮಿತಿಯ ಆಶ್ರಯದಲ್ಲಿ ಮೊಸರುಕುಡಿಕೆ ಉತ್ಸವವು ತಾ. 23ರಂದು ಸಂಜೆ ಮೊಸರುಕುಡಿಕೆ ಕಟ್ಟೆಯಲ್ಲಿ ವಿವಿಧ ಕಾರ್ಯಕ್ರಮಗಳಿಂದ ಅತ್ಯಂತ ಸಂಭ್ರಮದಲ್ಲಿ ನಡೆಯಿತು. ಉತ್ಸವದ ಹಿಂದಿನ ದಿನ (ತಾ. 22) ರಾತ್ರಿ ಅದೇ ಸ್ಥಳದಲ್ಲಿ ಅತ್ತಾವರ ಫ್ರೆಂಡ್ಸ್ ಆರ್ಟ್ಸ್ ಸರ್ಕಲ್‌ದವರಿಂದ ಸಾಂಸ್ಕೃತಿಕ ಕಲೋತ್ಸವವು ಈ ವರ್ಷದ ಹೊಸ ಆಕರ್ಷಣೆಯಾಗಿತ್ತು. 'ಪೊಲ್ಲದ ಮದಿಮೆ' ಎಂಬ ತುಳು ನಾಟಕ, ಹಾಸ್ಯ, ನೃತ್ಯಾದಿ ವಿನೋದಗಳು ಜರಗಿದ್ದುವು.

ಮಂಗಳೂರು ಅಶೋಕನಗರ ಹಿಂದೂ ಧಾರ್ಮಿಕ ಸೇವಾ ಸಂಘದ ವತಿಯಿಂದ 'ಮೊಸರುಕುಡಿಕೆ' ಉತ್ಸವವು ಹಿಂದಿನ ವರ್ಷಗಳಿಗಿಂತಲೂ ಅತ್ಯಂತ ಸಂಭ್ರಮದಿಂದ ನೆರವೇರಿತು. ಅದೇ ದಿನ ರಾತ್ರಿ ಮಂಗಳೂರು ಸಾಧನಾ ಕಲಾ ವೃಂದದವರು ಅಶೋಕ ನಗರ ರೂರಲ್ ಎಲಿಮೆಂಟರಿ ಶಾಲೆಯಲ್ಲಿ 'ಪೊಸ ಮದಿಮೆ' ಎಂಬ ಸಹಾಯಾರ್ಥ ನಾಟಕವನ್ನು ಅಭಿನಯಿಸಿದ್ದರು.

ಗದ್ದೆಕೇರಿ ಶ್ರೀಕೃಷ್ಣ ಮಂದಿರದ ವತಿಯಿಂದ ನಡೆಯುವ ಉತ್ಸವವು ತಾ. 23ರಂದು ಸಂಜೆ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಬಂದು ಮಡಿಕೆಗಳನ್ನು ಒಡೆಯುವ ಕಾರ್ಯಕ್ರಮಾದಿಗಳಿಂದ ಯಶಸ್ವಿಯಾಗಿ ಜರಗಿತು.

ಭಿಕ್ಷುಕರ ಬಗ್ಗೆ ಯೋಗ್ಯ ಕ್ರಮಕೈಕೊಳ್ಳುವ ನಿರ್ಣಯ

ಮಂಗಳೂರಲ್ಲಿ ಭಿಕ್ಷಾಟನಾ ನಿಷೇಧ ಕಾಯಿದೆಯನ್ನು ಯಶಸ್ವಿಯಾಗಿ ಅನ್ವಯಿಸಲು ಪೋಲೀಸ್ ಖಾತೆಯಿಂದ ಸಾಕಷ್ಟು ಪ್ರೋತ್ಸಾಹ ಸಿಗುತ್ತಿಲ್ಲವಾದುದರಿಂದ ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳ ಗಮನ ಸೆಳೆಯಲು ಮಂಗಳೂರು ನಗರಸಭೆಯು ತೀರ್ಮಾನಿಸಿದೆ.

ಮೂಡಬಿದ್ರೆ ಸರಸ್ವತಿ ಸೇವಾ ಸಂಘ

ಮೂಡಬಿದ್ರೆ ಸರಸ್ವತಿ ಸೇವಾ ಸಂಘದ ವಾರ್ಷಿಕ ಮಹಾಸಭೆಯು ತಾ. 19ರಂದು ಸ್ಥಳೀಯ ಸಮಾಜ ಮಂದಿರದಲ್ಲಿ ಶ್ರೀ। ಜಿ. ಗೋಪಾಲ ಪೈಯವರ ಅಧ್ಯಕ್ಷತೆಯಲ್ಲಿ ಜರಗಿದಾಗ ಅಕ್ಟೋಬರ್ ತಾ. 1ರಿಂದ 9ರ ವರೆಗೆ ಸಂಘದ ಆಶ್ರಯದಲ್ಲಿ 17ನೇ ದಸರಾ ಮತ್ತು ಕಲೋತ್ಸವ ಜರಗಿಸುವ ನಿರ್ಣಯವಾಯಿತು.

ಎಂಡೋಮೆಂಟ್ ಅಸಿಸ್ಟೆಂಟ್ ಕಮಿಷನರ್

ಅಸಿಸ್ಟೆಂಟ್ ಕಮಿಷನರ್ ಶ್ರೀ। ಸಿ. ಕೆ. ಶ್ರೀನಿವಾಸರಾವ್ ಇವರನ್ನು ಹೊಸಪೇಟೆಯಿಂದ ಮಂಗಳೂರಿಗೆ ವರ್ಗಾಯಿಸಿ ಹಲವು ತಿಂಗಳುಗಳಿಂದ ಖಾಲಿ ಬಿದ್ದಿರುವ ದ. ಕ. ಜಿಲ್ಲಾ ಹಿಂದೂ ರಿಲೀಜಿಯಸ್ ಎಂಡೋಮೆಂಟ್ ಅಸಿಸ್ಟೆಂಟ್ ಕಮಿಷನರರನ್ನಾಗಿ ನೇಮಿಸಲಾಗಿದೆ.



“ವೀರ ಹನುಮಾನ್”

ಮೊದಲ ಮಾತುಗಳು

ಹನುಮಂತನ ಕತೆ ವಿಸ್ತಾರವಾಗಿ ವಾಲ್ಮೀಕಿ ರಾಮಾಯಣದಲ್ಲಿದೆ. ಒಂದಿಷ್ಟು ತತ್ತ್ವ ಸಂಗ್ರಹ ರಾಮಾಯಣದಲ್ಲಿದೆ, ಅಧ್ಯಾತ್ಮ ರಾಮಾಯಣದಲ್ಲಿದೆ, ಶಿವಪುರಾಣದಲ್ಲಿದೆ, ವ್ಯಾಸಭಾರತದಲ್ಲಿದೆ, ಮುಕ್ತಿಕೋಪನಿಷತ್ತಿನಲ್ಲಿದೆ! ಈ ಎಲ್ಲಾ ಕೃತಿಗಳಲ್ಲಿ ಕೆಲವೆಡೆ ಒಂದಕ್ಕೊಂದು ಹೊಂದಿಕೊಂಡಿದ್ದರೂ. ಕೆಲವೆಡೆ ಪ್ರತ್ಯೇಕತಾರೂಪವಾಗಿದೆ. ಪ್ರಕೃತ ವಾಲ್ಮೀಕಿ ರಾಮಾಯಣದಲ್ಲಿ ಹೇಳಿದ ಹನುಮನ ಕತೆಗೆ ಹೊಂದಿಕೆಯಾಗುವ ಇತರ ಕೃತಿಗಳಲ್ಲಿಯ ಕಥಾಂಶಗಳನ್ನು ಜತೆಕರಿಸಿ ಸಂಗ್ರಹವಾಗಿ ಬರೆಯಲಾಗಿದೆ.


ವಾಲ್ಮೀಕಿ ರಾಮಾಯಣದಲ್ಲಿ ‘ನಾನೃಗ್ವೇದ ವಿನೀತಸ್ಯ’ ಇತ್ಯಾದಿಯಾಗಿ ಶ್ರೀ ರಾಮನು ಪ್ರಪ್ರಾಥಮಿಕವಾಗಿ ಹನುಮನ ಮಾತು ಕೇಳಿದಾಗ ಲಕ್ಷ್ಮಣನೊಡನೆ ಹೇಳುವನೆಂದಿದೆ: ಅಂತೆ ಇವನು ಪಟುವಾದನೆಂದಿದೆ.

ರಾಮಸಂದೇಶವನ್ನು ಸೀತೆಗೆ ಹೇಳುವಲ್ಲಿಯೂ, ಇವನ ವಾಕ್ಸರಣಿಯು ವಿಚಾರವಾಗಿ ವಿಸ್ತರಿಸಿಯದೆ. ಜೈನ ಸಾಹಿತ್ಯ ಪ್ರಪಂಚದಲ್ಲಿ ಹನುಮನು ವಾನರಧ್ವಜನೆಂಬುದಾಗಿ ಹೇಳಿದೆ. ಇವೇ ಮೊದಲಾದ ಸಂಗತಿಗಳನ್ನು ವಿವೇಚಿಸಿದರೆ, ರಾಮಾಯಣ ಕತೆಯ ಕಪಿಗಳು ಕೇವಲ ಕಪಿಗಳಲ್ಲ, ಕಪಿಗಳೆಂದು ರೂಪಿಸಿದ ಜನಾಂಗವೆಂದು ಹೇಳಲಡ್ಡಿಯಿಲ್ಲ! ಇತ್ತೀಚೆಗೆ ಈ ಬಗ್ಗೆ ಮತ್ತೂ ವಿವರಿಸಿ, ಈ ಕಪಿಗಳೆಂದರೆ ಕನ್ನಾಡ ಜನಾಂಗವಿರಬೇಕೆಂದು ಬಲ್ಲವರು ನಿರೂಪಿಸಿರುತ್ತಾರೆ. ಅದುಕಾರಣ ವೀರ ಹನುಮನ ಕತೆಯನ್ನು ಸಂಗ್ರಹವಾಗಿ ಬರೆಯಲೆಳಸಿದುದಾಗಿದೆ. ಇಂತಹ ಪ್ರಾಚೀನ ಕತೆಗಳಿಂದ ನಮ್ಮಲ್ಲಿ ಸದ್ಗುಣಗಳು ಒಡಮೂಡಿ ಬರಲು ಅನುವಾಗಬಹುದೆಂದು ವಿಶ್ವಾಸವಿದೆ.

‘ಹನುಮಾನ್ ದಾಸ್ಯೇ’ ಎಂದು ಹನುಮನನ್ನು ಕುರಿತು ಉದ್ಗಾರವಿದೆ. ಅದುಕಾರಣ ಶ್ರೀ ರಾಮನ ಪರಿವಾರದ ಚಿತ್ರೀಕರಣದಲ್ಲಿ ಹನುಮನನ್ನು ಪ್ರಾಮುಖ್ಯವಾಗಿ ಗುರುತಿಸುತ್ತಾರೆ! ಕಪಿವೃಂದದಲ್ಲಿ ಇವನಷ್ಟು ‘ವೀರ’ನು ಇನ್ನೊಬ್ಬನಿಲ್ಲವೆನ್ನುತ್ತಾರೆ! ಆ ಮೇರೆಗೆ ಇದಕ್ಕೆ “ವೀರ ಹನುಮಾನ್” ಎಂಬ ಹೆಸರಿಟ್ಟಿದೆ. ಇಂತಹ ಲಘು ಪರಿಚಯ ಲೇಖನಗಳು ಇತರ ಭಾಷೆಗಳಲ್ಲಿ ಅನೇಕಶಃ ಇವೆ, ಕನ್ನಡದಲ್ಲಿ ತೀರಾ ವಿರಳ. “ವೀರ ಹನುಮಾನ್” ಲೇಖನವು “ಪ್ರಭಾತ” ವಾರಪತ್ರಿಕೆಯಲ್ಲಿ ಮುಂದಿನ ವಾರದಿಂದ ಕ್ರಮಶಃ ಪ್ರಕಟವಾಗುವುದು. ವಾಚಕರು ಇದನ್ನು ಗುಣಗ್ರಹಣದೃಷ್ಟಿಯಿಂದ ನಿರೀಕ್ಷಿಸಲು ವಿನಂತಿಸುತ್ತೇನೆ.

ಎಂ. ಎಸ್. ಆಚಾರ್, ಸುರತ್ಕಲ್ಲು.

ಬರ್ಲಿನ್ ಸಮಸ್ಯೆಯ ಹೊಸ ರೂಪ



ಜರ್ಮನಿಯ ಹಳೇ ರಾಜಧಾನಿ ಬರ್ಲಿನ್ ನಗರವೂ, ಜರ್ಮನಿಯಂತೇ ಪೂರ್ವ ಮತ್ತು ಪಶ್ಚಿಮವೆಂಬುದಾಗಿ ವಿಭಜಿಸಲ್ಪಟ್ಟು, ಕಳೆದವರ್ಷ, ಪೂರ್ವ ಜರ್ಮನಿಯ ಆಡಳಿತವು, ನಗರದ ನಡುವೆ ಗೋಡೆಯನ್ನೇ ಕಟ್ಟಿತು. ಪಶ್ಚಿಮ ಜರ್ಮನಿಯ ನಾಗರಿಕರು ಕೆರಳಿದರು. ಘರ್ಷಣೆಯುಂಟೇಗಿ, ಇನ್ನೊಂದು ಮಹಾ ಯುದ್ಧವೇ ಏಳಬಹುದೆಂಬ ಭೀತಿಯೂ ಉಂಟಾಯಿತು. ಈಗ, ಈ ಗೋಡೆ ಹಾರಿಯೂ ಪೂರ್ವ ಜರ್ಮನಿಯಿಂದ ತಪ್ಪಿಸಿಕೊಂಡವರಿದ್ದಾರೆ. ಮೇಲಿನ ಚಿತ್ರದಲ್ಲಿ ಪೂರ್ವ ಜರ್ಮನಿಯ ಸೈನಿಕನೊಬ್ಬನು ಮುಳ್ಳುಬೇಲಿಯನ್ನು ಹಾರಿ ತಪ್ಪಿಸಿಹೋಗುವುದನ್ನು ತೋರಿಸಲಾಗಿದೆ. ಈಗ, ಕಳೆದವಾರ, ಬರ್ಲಿನ್ ಗೋಡೆಗೆ ಒಂದು ವರ್ಷ ತುಂಬಿತು. ಸೋವಿಯಿತ್ ರಷ್ಯವು, ಪಶ್ಚಿಮದೊಡನೆ—ಸೇನಾಸರಬರಾಯಿ ಮತ್ತು ಚಲನವಲನಗಳ ಬಗ್ಗೆ ವ್ಯವಸ್ಥೆಗೆ ನೇಮಿಸಿದ್ದ ತನ್ನ ಅಧಿಕಾರಿಯನ್ನು ಹಿಂದೆಗೆದುಕೊಂಡಿದೆ—ಮತ್ತು ಪೂರ್ವಜರ್ಮನಿಯ ಜನರಲರೊಬ್ಬರೇ ಈ ಸ್ಥಾನದಲ್ಲಿ ನೇಮಿತರಾಗಿದ್ದಾರೆ. ಈ ಹೊಸ ನೇಮಕವು, ಪಾಶ್ಚಿಮಾತ್ಯ ರಾಷ್ಟ್ರಗಳಿಗೊಂದು ಸಮಸ್ಯೆ ತಂದೊಡ್ಡಿದೆ. ಅವರು ಕೆಲವು ವಿಶೇಷ ನಿರ್ಬಂಧಗಳೇಳಬಹುದೇ ಎಂದೂ ಸಂಶಯಕ್ಕೀಡಾಗಿದ್ದಾರೆ. ಪರಿಸ್ಥಿತಿಯು ಯಾವ ನಿಮಿಷಕ್ಕೆ ಕೆಡಬಹುದೆಂದು ಹೇಳಲಾಗುವುದಿಲ್ಲ.

ಚಿನ್ಮಯ ಮಿಷನ್ ಬಾಲವಿಹಾರ

ಮಂಗಳೂರು ಚಿನ್ಮಯ ಮಿಷನ್ ಬಾಲವಿಹಾರದ ದ್ವಿತೀಯ ವಾರ್ಷಿಕೋತ್ಸವವು ತಾ. 19ರಂದು ಪಲ್ಕೆ ಕೃಷ್ಣಾ ಚಾರ್ ಸಭಾಭವನದಲ್ಲಿ ಶ್ರೀಮತಿ ಆನಂದಿ ಸದಾಶಿವರಾವ್‌ರವರ ಅಧ್ಯಕ್ಷತೆಯಲ್ಲಿ ಜರಗಿತು. ವಿಹಾರದ ಬಾಲಬಾಲಕಿಯರಿಂದ ಸಂಗೀತ, ನಾಟಕ, ನೃತ್ಯ ಕಾರ್ಯಕ್ರಮಗಳಿದ್ದುವು.

ನಿಧನ

ದಿವಂಗತ ಮೂಲ್ಕಿ ಮೇಗಿನ ಪೇಟೆ ರಾಮ ಕಾಮತ್‌ರವರ ಪತ್ನಿ ಶ್ರೀಮತಿ ಸೀತಮ್ಮ ಯಾನೆ ಮಹಾಮ್ಮಾಯಿ ಅಮ್ಮನವರು (ಎಡ್ವಕೇಟ್ ಶ್ರೀ। ಎಂ. ಎಸ್. ಕಾಮತರ ತಾಯಿ) ತಾ. 23ರಂದು ಸಂಜೆ 95ನೇ ಹಿರೇ ವಯಸ್ಸಿನಲ್ಲಿ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ಮಹಿಳಾ ಸಮಾಜದ ಸಭೆ

ಪಂಜ ಮಹಿಳಾ ಸಮಾಜದ ಅವಸರದ ಸಭೆಯೊಂದು ಸ್ಥಳೀಯ ಸಮಾಜ ಮಂದಿರದಲ್ಲಿ ಅಧ್ಯಕ್ಷೆ ಶ್ರೀಮತಿ ಲೀಲಾವತಿ ಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಜರಗಿದಾಗ, ಸರಕಾರದ ಜನರಲ್ ಹೊಸ್ಪಿಟಲ್ ಸ್ಕೀಮಿನ ಮೇರೆಗೆ ಕಟ್ಟಿಸಲ್ಪಡುವ ಒಂದು ವಿದ್ಯಾರ್ಥಿನಿ ಭವನವನ್ನು ಪಂಜ ವನಿತಾ ಸಮಾಜದ ವತಿಯಿಂದ ಕಟ್ಟಿಸಲು ಸರಕಾರದ ಮಂಜೂರಾತಿಗಾಗಿಯೂ, ರೂ. 50 ಸಾವಿರ ಧನ ಸಹಾಯ ಕೊಡಿಸುವಂತೆಯೂ ಸರಕಾರವನ್ನು ಕೇಳಿಕೊಳ್ಳಬೇಕೆಂದು ನಿರ್ಣಯಿಸಲಾಯಿತು.

ರೋಟರಿ ಕ್ಲಬ್ ಸಭೆ

ಕುಂದಾಪುರ ರೋಟರಿ ಕ್ಲಬ್ಬಿನ ಸಾಪ್ತಾಹಿಕ ಸಭೆಯು ತಾ. 18ರಂದು ಸಂಜೆ ಕ್ಲಬ್ಬಿನ ಅಧ್ಯಕ್ಷ ಡಾ। ಎಚ್. ವೆಂಕಟರಮಣಯ್ಯನವರ ಅಧ್ಯಕ್ಷತೆಯಲ್ಲಿ ಜರಗಿದಾಗ ಶ್ರೀ। ಕೆ. ರಾಧಾಕೃಷ್ಣ ಕಾರಂತರು ಕೊಂಗೋ ಹಿನ್ನಲೆ ಮತ್ತು ಸ್ವಾತಂತ್ರ್ಯನಂತರ ಅಲ್ಲಿ ನಡೆದ ಹಿಂಸಾಕೃತ್ಯಗಳ ಕುರಿತು ಭಾಷಣ ಮಾಡಿದರು.

ಸಿಟಿ ಯುವಕ ಕೊಂಗ್ರೆಸ್

ಮಂಗಳೂರು ಸಿಟಿ ಯುವಕ ಕೊಂಗ್ರೆಸಿನ ಸಾಪ್ತಾಹಿಕ ಸಭೆಯು ಕಂಕನಾಡಿ ಮಂಡಲ ಯುವಕ ಕೊಂಗ್ರೆಸ್ಸಿನ ಆಶ್ರಯದಲ್ಲಿ ಪಡೀಲ್‌ದಲ್ಲಿರುವ ಕಚೇರಿಯಲ್ಲಿ ತಾ. 19ರಂದು ಶ್ರೀ। ಬಿ. ಲಕ್ಷ್ಮಣದೇವ ವಿದ್ಯಾರ್ಥಿಯವರ ಅಧ್ಯಕ್ಷತೆಯಲ್ಲಿ ಜರಗಿದಾಗ ಮಾಜಿ ವಿಧಾನಸಭಾ ಸದಸ್ಯ ಶ್ರೀ। ಬಿ. ದೂಮಪ್ಪ, ಜಿಲ್ಲಾ ಯುವಕ ಕೊಂಗ್ರೆಸ್ಸಿನ ಕಾರ್ಯದರ್ಶಿ ಶ್ರೀ। ಎಂ. ಜಯಾನಂದ ದೇವಾಡಿಗ ಮತ್ತು ಶ್ರೀ। ಜಿ. ಬಿ. ಶೆಟ್ಟಿಯವರು ಭಾಷಣಮಾಡಿದರು. ಶ್ರೀ। ಗೋವಿಂದರಾಯರು ಪ್ರತೀ ಮಂಡಲ ಯುವಕ ಕೊಂಗ್ರೆಸ್ಸಿನಲ್ಲಾಗುತ್ತಿರುವ ಕಾರ್ಯಗಳನ್ನು ವಿವರಿಸಿದರು.

ನದಿಗೆ ಹಾರಿ ಆತ್ಮಹತ್ಯೆ

ತಿನ್ನವೆಲ್ಲಿ ಜಿಲ್ಲೆಯವನೆನ್ನಲಾದ ಓರ್ವ ತರುಣನು ಕಳೆದ ತಾ. 23ರಂದು ಮಂಗಳೂರು ಬಂದರ ಧಕ್ಕೆಯ ಬಳಿ ನದಿಗೆ ಹಾರಿ ಆತ್ಮಹತ್ಯೆ ಕೈಕೊಂಡುದು ವರದಿಯಾಗಿದೆ. ಅವನಿಗೆ ಕೆಲದಿನಗಳಿಂದ ಅಸೌಖ್ಯವಿದ್ದು ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತಿದ್ದನೆನ್ನಲಾಗಿದೆ.

● ಭಟ್ಕಳವನ್ನು ಕಿರಿಯ ಬಂದರವನ್ನಾಗಿ ಅಭಿವೃದ್ಧಿಗೊಳಿಸುವ ದಿಸೆಯಲ್ಲಿ ನಡೆಸಲಾದ ಪ್ರಯೋಗಗಳು ಹಾಗು ಪರಿಶೀಲನೆಗಳು ಯಶಸ್ವೀ ಫಲಿತಾಂಶಗಳನ್ನು ತಂದಿವೆ ಎಂದು ತಿಳಿಯಲಾಗಿದೆ. ತೃತೀಯ ಪಂಚವಾರ್ಷಿಕ ಯೋಜನೆಯಲ್ಲಿನ ಮೈಸೂರು ರಾಜ್ಯದ ಕಿರಿಯ ಬಂದರುಗಳ ಅಭಿವೃದ್ಧಿಯಲ್ಲಿ ಭಟ್ಕಳ ಬಂದರಿನ ಅಭಿವೃದ್ಧಿ ಯೋಜನೆಯೂ ಸೇರಿದೆ.

ತುಳುಸಂಧಿಯ ಕತೆ:—೩೫.

ಪ್ರತಿಜ್ಞಾಪೂರ್ತಿ

ಸೊರಲಗುತ್ತು! ಗಂಡ—ಸೊರಲ ಗುತ್ತಿನ ಮಾಡ; ಹೆಂಡತಿ-ದೇವಿ ಮಾಡೆದಿ, ದೇವಿ ಮಾಡೆದಿ ಏಳು ಮಕ್ಕಳನ್ನು ಹಡೆದಳು. ಏಳು ಸಹ ಗಂಡುಮಳೇ.

ಏಳು ಮಂದಿ ಗಂಡುಮಕ್ಕಳನ್ನು ಹೆತ್ತ ದೇವಿ ಮಾಡೆದಿ ತನಗಿನ್ನು ಹೆಣ್ಣು ಹುಟ್ಟುವುದಿಲ್ಲವೆಂದೇ ನೆರೆನಂಬಿದಳು.

ಅಂಥ ಕಾಲದಲ್ಲಿ ಅವಳು ಎಂಟನೇ ಬಾರಿ ಗರ್ಭವತಿಯಾದಳು. ಮುಂದೆ ನವಮಾಸ ತುಂಬಿತು:

ಬೃಹತ್ ಸೊರಲ ಗ್ರಾಮಕ್ಕೆ ಸಾಗುವಳಿಗೆ ಅನುಕೂಲವಾಗಿಯೂ, ಪ್ರಾಧಾನ್ಯವಾಗಿಯೂ ಇದ್ದಂಥ ಒಂದೇ ಒಂದಾದ ತೊರೆಗೆ ಕಟ್ಟಿದ ಒಡ್ಡು—ಸೊರಲ ಕಟ್ಟೆ—ಉಂಟು.

ಒಂದು ದಿನ ತುಂಬು ಗರ್ಭಿಣಿಯಾದ ದೇವಿಮಾಡೆದಿ “ಕಡ್ಯ ಕೊಡಪಾನ” (ಮಣ್ಣಿನ ಕೊಡಪಾನ) ಹಿಡಿದುಕೊಂಡು ಸೊರಲಕಟ್ಟೆಗೆ ನೀರು ತರುವುದಕ್ಕೆ ಹೋದಳು.

ಮಾಡೆದಿ ಸೊರಲಕಟ್ಟೆದ ಮೇಲೆ ನಿಂತು ಬಾಗಿ ಕೆಳಗೆ ಈಕ್ಷಿಸಿದಳು. ನೀರಿನಲ್ಲಿ ಎರಡು ಸುಂದರವಾದ ಮೀನುಗಳು ಆಡುತ್ತಿರುವ ದೃಶ್ಯ ಅವಳಿಗೆ ಗೋಚರಿಸಿತು.

ಅವುಗಳು ನಾಗಬ್ರಹ್ಮನ ಮೀನುಗಳಾಗಿದ್ದವು!

ಮೀನಿನ ಮಾಟ—ಅಂದ ಚಂದ—ಮಾಡೆದಿಯ ಮನಸ್ಸನ್ನಾಕರ್ಷಿಸಿತು. ಮೀನಿನ ಮೇಲೆ ಗರ್ಭಿಣಿಗೆ ಬಯಕೆಯಾಯಿತು. ಹಿಡಿದು ಮನೆಗೆ ಕೊಂಡ್ಯೊಯ್ದು ಪದಾರ್ಥಮಾಡಿ ತಿನ್ನಬೇಕೆಂಬ ತವಕವುಂಟಾಯಿತು.

ತತ್ಕ್ಷಣದಲ್ಲಿ ಅವಳು ಮೀನುಗಳನ್ನುದ್ದೇಶಿಸಿ ಈ ರೀತಿ ವಚನಿಸಿದಳು:

”ನಾನು ನೀರಿನಲ್ಲಿ ನನ್ನ ಕೊಡಪಾನ ಮುಳುಗಿಸುವಾಗ ಇದರೊಳಗೆ ಈ ಎರಡು ಮೀನುಗಳು ಬಿದ್ದು ಸಿಕ್ಕೊಂಡರೆ, ಗಂಡು ಹೆತ್ತರೆ ಸೊರಲಕಟ್ಟೆ ಕಟ್ಟುವಾಗ ಹಾರೆ ಸುಟ್ಟಿ ಕೊಟ್ಟು ಅವನಿಂದ ಮಣ್ಣು ಹೊರಿಸುವೆನು. ಹೆಣ್ಣು ಹೆತ್ತರೆ ಆ ಹೆಣ್ಣನ್ನು ಈ ಸೊರಲಕಟ್ಟೆಕ್ಕೆ ಹಾಕಿ “ಗಂಡಿ ಅಡಪಪೇ!” (ಒಡ್ಡು ಕಟ್ಟಿಸುವೆನು!)”

ಹಾಗೆ ಹೇಳಿ ದೇವಿ ಮಾಡೆದಿ ಕೊಡಪಾನವನ್ನು ನೀರಿಗೆ ಮುಳುಗಿಸಿದಳು. ಮುಳುಗಿಸುವಾಗ ಎರಡು ಮೀನುಗಳೂ ಕೊಡಪಾನದೊಳಗೆ ನುಸುಳಿಕೊಂಡವು. ಪರಕ್ಕನೇ ಕೊಡಪಾನವನ್ನು ಮೇಲೆತ್ತಿದಳು. ಸೊಂಟಕ್ಕೆ ಅವಚಿಕೊಂಡಳು ತಾನು ಬಯಸಿದ ಮೀನುಗಳು ತನಗೆ ಸಿಕ್ಕಿದುದರಿಂದ ಅವಳಿಗೆ ಅತ್ಯಾನಂದವಾಯಿತು. ಮನೆಗೆ ಕಾಲುಕಿತ್ತಳು.

ಮನೆಗೆ ಬಂದವಳು ಮೀನುಗಳನ್ನು ಕೊಡಪಾನದಿಂದ ತೆಗೆದು “ಬಿಸಲೆ” (ಮಣ್ಣಿನ ಹರಬಾಯಿಯ ಪಾತ್ರೆ)ಗೆ ಹಾಕಿದಳು. ಮೆಟ್ಟುಗತ್ತಿ ತಂದು ಮೀನು ಹೆಚ್ಚಲಿಕ್ಕೆ ಕೂತಳು. ಮೀನುಗಳನ್ನು ಕೊಯ್ಯುವಾಗ ಅವುಗಳಿಂದ ನೆತ್ತರು ಧಾರೆಧಾರೆಯಾಗಿ ಸುರಿಯಲುಪಕ್ರಮಿಸಿತು. ನೆತ್ತರಿನಿಂದ ಅದ್ದಿ ಹೋಗಿ ಮೀನುಗಳು ಕಾಣುತ್ತಿರಲಿಲ್ಲ.

ಅಷ್ಟರಲ್ಲಿ ಐಗಳ ಶಾಲೆಗೆ ಹೋದ ಏಳು ಮಂದಿ ಮಕ್ಕಳು ಮಧ್ಯಾಹ್ನದ ಊಟಕ್ಕೆ ಮನೆಗೆ ಬಂದರು. ಅವರು ತಾಯಿ ಮೀನು ಹೆಚ್ಚುವುದನ್ನು ಕಂಡರು. ತಾಯಿಯ ಮಗ್ಗಲಲ್ಲಿ ನಿಂತು ನಿಬ್ಬೆರಗೊಂಡು ಕೇಳಿದರು:

“ತಾಯೀ, ಇದು ಯಾವ ಮೀನು? ನೆತ್ತರಿನಿಂದ ಮುಚ್ಚಿಹೋಗಿ ನಿಮ್ಮ ಕೈ ಕಾಣುತ್ತಿಲ್ಲ, ಮೀನು ತೋರುತ್ತಿಲ್ಲ! ಇದೆಂತಹ ವಿಚಿತ್ರ ಮೀನಪ್ಪಾ”

“ನಿಲ್ಲಿ, ಮಕ್ಕಳೇ. ಒಳ್ಳೆ ಮೀನುಗಳಿವು! ಪದಾರ್ಥಮಾಡಿ ನಿಮಗೆ ಉಣಬಡಿಸುತ್ತೇನೆ”—ಎಂದಳು ಮಾಡೆದಿ.

“ಬೇಡ ಬೇಡ! ನಾವು ಈ ಮೀನಿನ ಪದಾರ್ಥ ತಿನ್ನಲಾರೆವು. ನೀವೇ ತಿನ್ನಿರಿ. ನಮಗೆ ಈಗ ಊಟ ಇಕ್ಕಿರಿ.”

ಮಕ್ಕಳು ಹಾಗೆಂದಾಗ ಮಾಡೆದಿ ಹೆಚ್ಚಿದ ಮೀನುಗಳನ್ನು ಹಾಗೇ ಬಿಟ್ಟು, ಕೈತೊಳೆದಳು. ಮಾಡಿಟ್ಟಿದ್ದ ಬೇರೆ ಪದಾರ್ಥದೊಂದಿಗೆ ಮಕ್ಕಳಿಗೆ ಊಟ ಇಕ್ಕಿದಳು.

ಮಕ್ಕಳು ಊಟ ತೀರಿಸಿ ಶಾಲೆಗೆ ಹೋದರು.

ತರುವಾಯ ಮಾಡೆದಿ ಹೆಚ್ಚಿಟ್ಟಿದ್ದ ಮೀನುಗಳನ್ನು ತೊಳೆಯುವಳು.

ನೀರಿನಲ್ಲಿ [illegible] ಮೀನಿನ ಹೋಳುಗಳಿಂದ ನೆತ್ತರು ಜಿನುಗುತ್ತಲೇ ಇತ್ತು. ಎಷ್ಟು ರುಬ್ಬಿದರೂ ನೀರು ಕೆಂಗಲಿಸಿಕೊಳ್ಳುತ್ತಿತ್ತು. ಹೇಗೂ ತೊಳೆಯುವ ಶಾಸ್ತ್ರವನ್ನು ಅಲ್ಲಲ್ಲಿಗೆ ಮುಗಿಸಿದಳು.

ಸಂಬಾರ ತೆಗೆದಳು. ತೆಂಗಿನಕಾಯಿ ಹೆರೆದಳು. ಅವುಗಳನ್ನು ಕಲ್ಲಿಗೆ ಹಾಕಿ ಮಸಾಲೆ ಕಡೆದಳು.

ಕಡೆಯುವಾಗ ಅವಳಿಗೆ ಇದ್ದಕ್ಕಿದ್ದ ಹಾಗೇ ಹೊಟ್ಟೆಯಲ್ಲಿ ಬೇನೆ ಗೋಚರಿಸಿತು.

ಕಲ್ಲಿನಿಂದ ಮಸಾಲೆ ತೆಗೆದು ಪರಡಿಯಲ್ಲಿ ಕಲಸಿ ಒಲೆಗಿಡುವಾಗಂತೂ ಬೇನೆ ಜೋರಾಯಿತು. ಕುದಿಯುತ್ತಿರುವ ಸಾರಿಗೆ ಮೀನಿನ ಹೋಳುಗಳನ್ನು ಸುರಿದಾಗಂತೂ ನೋವು ಉಲ್ಬಣಾವಸ್ಥೆಗೇರಿತು. ಕೂರಲು ನಿಲ್ಲಲು ಅವಳಿಗೆ ಕಠಿಣವೆನಿಸಿತು. ಹೇಗೂ ಮಲಗುವ ಕೋಣೆಗೆ ನಿಧಾನವಾಗಿ ತೆವಳಿಕೊಳ್ಳುತ್ತ ಹೋಗಿ ಅಲ್ಲಿ ಮುಗ್ಗರಿಸಿ ಬಿದ್ದುಕೊಂಡಳು.

ಅವಳ ನರಳುವಿಕೆ—ಆರ್ತಧ್ವನಿಯನ್ನು ಚಾವಡಿಯಲ್ಲಿದ್ದ ಗಂಡ ಮಾಡನು ಕೇಳಿ ಹೆಂಡತಿಯ ಬಳಿಗೆ ಓಡಿ ಬಂದನು.

ಹೆಂಡತಿಗೆ ಬೇನೆ ಬರುತ್ತಿರುವುದನ್ನು ಮನಗಂಡು ಕೂಡಲೇ ಅವಸರವಸರವಾಗಿ ಸೂಲಗಿತ್ತಿಯರನ್ನು ಕರೆಯಿಸಿದನು.

ಪ್ರಸವ ಶ್ರಮ ನಿವಾರಣಕ್ಕೆ ಆಧರಿಸಿ ಹಿಡಿಯುವುದಕ್ಕಾಗಿ ಅನುಕೂಲವಾದ ಕಡೆಯಲ್ಲಿ ರಜ್ಜುವನ್ನು ಬಿಗಿದು ಇಳಿಬಿಟ್ಟನು.

ಸೂಲಗಿತ್ತಿಯರು ಬಂದು ನರಳುತ್ತ ಕೂಗುತ್ತ ಬಡಬಡಿಸುತ್ತಿರುವ ಗರ್ಭಿಣಿಗೆ ಉಪಚಾರ ಕ್ರಮವನ್ನು ಎಸಗಿದರು. ಆದರೆ ದೇವಿ ಮಾಡೆದಿಗೆ ಬಹಳ ಹೊತ್ತಾದರೂ ಪ್ರಸವವಾಗುತ್ತಿಲ್ಲ. ಕೊನೆಗೆ [illegible] ಗರ್ಭಿಣಿ ಸಂಕೋಚ[illegible]ನ್ನ ಮನೋ ಅಂತರ್ಗತ ಅಭಿಲಾಷೆಯನ್ನು ಬಳಸುಮಾರ್ಗದ ಮಾತಿನಿಂದ ಸೂಲಗಿತ್ತಿಯರಿಗೆ ವ್ಯಕ್ತಪಡಿಸಿದಳು:

“ಅಕ್ಕನವರೇ, ನಾನು ಒಲೆಯ ಮೇಲೆ ಮೀನಿನ ಪದಾರ್ಥವನ್ನು ಬೇಯಿಸಲಿಟ್ಟಿದ್ದೇನೆ.”

ಇಂಗಿತವನ್ನು ವೇದ್ಯವರಿತ—ಸೂಲಗಿತ್ತಿಯರು ಒಡನೇ ಅಡಿಗೆಮನೆಗೆ ಹೋಗಿ ಕುದಿಯುತ್ತಿರುವ ಪದಾರ್ಥದ ಮಡಕೆಯಿಂದ ಒಂದು ತುಂಡು ಮೀನನ್ನು ತೆಗೆದುಕೊಂಡು ತಂದು ಗರ್ಭಿಣಿಯ ಬಾಯಿಗೆ ಹಾಕಿದರು.

ಅದನ್ನು ತಿಂದು ತರುವಾಯ ತಾನೇ ದೇವಿ ಮಾಡೆದಿಗೆ ಪ್ರಸವವಾಯಿತು; ಹೆಣ್ಣು ಶಿಶುವನ್ನು ಹಡೆದಳು!

೦ ೦ ೦ ೦

ಹೆಣ್ಣು ಮಗುವನ್ನು ಭಾರೀ ಕೊಂಡಾಟದಿಂದ ಗಂಡಹೆಂಡತಿಯರು ಸಾಕಿದರು. ದಿನದಿಂದ ದಿನಕ್ಕೆ ಮಗು ನೀರಿನಂತೆ ಪ್ರವೃದ್ಧಿಸುತ್ತ, ಬೆಂಕಿಯಂತೆ ಪ್ರಜ್ವಲಿಸುತ್ತ ಬೆಳೆಯಿತು!

ಹೆಣ್ಣು ಮಗುವಿಗೆ ಬಾಲೆ ಮಾಡೆದಿ ಎಂದು ಹೆಸರಿಟ್ಟರು.

ಮುಂದೆ ಬಾಲೆ ಮಾಡೆದಿ ಮೈನೆರೆದು ವಿವಾಹವಯಸ್ಕಳಾದಳು.

ಸೊರಲಗುತ್ತಿನ ಮಾಡ ಖಾಸಾ ಸೋದರ ಅಳಿಯನಿಗೆ ತನ್ನ ಮಗಳು ಬಾಲೆ ಮಾಡೆದಿಯನ್ನು ಕೊಟ್ಟು ಮದುವೆ ಜರಗಿಸುವ ನಿರ್ಧಾರಮಾಡಿದನು. ಮಾಡನ ಮತ್ತು ಅಳಿಯನ ಮನೆಗಳು ಅಕ್ಕಪಕ್ಕದಲ್ಲಿದ್ದು “ಸತ್ತು ಗುತ್ತು”ಗಳಾಗಿದ್ದವು.

ಇಕ್ಕಡೆಯವರು ನಿಶ್ಚಯ ತಾಂಬೂಲ ಜರಗಿಸಿ ಮದುವೆ ದಿನ ನಿಜಮಾಡಿದರು; ಪ್ರಚಲಿತ ಹಪ್ತೆಯ ಗುರುವಾರವಲ್ಲ, ಮೇಲಿನ ಗುರುವಾರ ಮದುವೆಯೆಂತ ನಿಘಂಟುಮಾಡಿದರು.

ಒಂದು ಕಡೆಯಲ್ಲಿ ವಿವಾಹ ಸನ್ನಾಹದ ಕಾರ್ಯಜಂಬರವಾದರೆ ಇನ್ನೊಂದು ಕಡೆಯಲ್ಲಿ ಸೊರಲ ತೊರೆಗೆ ಒಡ್ಡು ಕಟ್ಟುವ ಕೆಲಸ ಬಿರುಸಿನಿಂದ ಸಾಗಿತ್ತು: ಒಂದು ತಿಂಗಳಲಾಗ್ಯಾತಿನಿಂದ ಸೊರಲಕಟ್ಟೆದ ಕೆಲಸ ನಡೆದಿತ್ತು. ಒಡ್ಡಿಗೆ ಮಣ್ಣು ಹ[illegible] ಎಷ್ಟೆಷ್ಟು [illegible] ನಿಂತುಕೊಳ್ಳುತ್ತಿದ್ದಿಲ್ಲ. ಆನು ಕಾರಣ ಮಣ್ಣು ತುಂಬಿಸುವುದು, ತೊರೆ ಅದನ್ನು ಕೊಚ್ಚಿಕೊಂಡು ಹೋಗಿ ಒಡ್ಡು ಕುಸಿಯುವುದು, ಪುನಃ ತುಂಬಿಸುವುದು—ಹೀಗೆ ಮೇಲಿಂದ ಮೇಲೆ ನಿಲುಗಡೆಯಿಲ್ಲದೆ ಅಹೋರಾತ್ರಿ ಒಡ್ಡಿನ ಕೆಲಸ ಮುಂದುವರಿದಿತ್ತು.

ಎರಡು ಕಾರ್ಯಗಳು ಸಹ ತುರ್ತದವುಗಳೇ. ಹಾಗಾಗಿ ಮದುವೆಮನೆಗಳ ಇಕ್ಕಡೆಯವರಿಗೆ ಸೊರಲಕಟ್ಟೆದ ಲಕ್ಷ್ಯದೊಂದಿಗೆ ಗೊತ್ತುಮಾಡಿದ ಮದುವೆ ಕಾರ್ಯವನ್ನು ಒಟ್ಟೊಟ್ಟಿಗೆ ವ್ಯವಹರಿಸಿಕೊಳ್ಳುವಂತಹ ಇರ್ಕಟ್ಟಿನ ಪರಿಸ್ಥಿತಿ ಬಂದೊದಗಿತು.

ಹಾ ಹಾ ಅನ್ನುವುದರೊಳಗೆ ಮದುವೆಯ ಗುರುವಾರ ಬಂತೇ ಬಂತು!

ಗ್ರಾಮದ ಕಟ್ಟಾಳುಗಳನೇಕ ಮಂದಿ ಸೊರಲಕಟ್ಟೆದ ಕೆಲಸದಲ್ಲಿ ನಿರತರಾಗಿದ್ದರು! ಇತ್ತ ಸೊರಲಗುತ್ತಿನಿಂದ ಬಾಲೆ ಮಾಡೆದಿಯ ದಿಬ್ಬಣ ಬ್ಯಾಂಡು, ವಾಲಗ, ಕೊಂಬುಗಳ ನಿನಾದಗಳಿಂದಲೂ ಸಿಡಿಮದ್ದಿನ ಗರ್ಜನೆಗಳಿಂದಲೂ ಅವ್ಯತವಾಗಿ ಅತ್ಯಂತ ಅಟ್ಟಹಾಸಯುಕ್ತವಾಗಿ ವರನ ಮನೆಗೆ ಹೊರಟಿತು. ಮದುಮಗಳಾದ ಬಾಲೆ ಮಾಡೆದಿ ಸರ್ವಾಲಂಕಾರಭೂಷಿತಳಾಗಿ ಸಿಂಗರಿಸಿದ ಪಲ್ಲಕಿಯಲ್ಲಿ ಆಸೀನಳಾಗಿದ್ದಳು.

ಸೊರಲಕಟ್ಟೆದ ಕೆಲಸ ಸಾಗುತ್ತಿದ್ದ ಹಾಗೇ ದಿಬ್ಬಣ ಅಪೂರ್ಣವಾದ ಒಡ್ಡಿನ ಮೇಲಿನಿಂದಲೇ ಹಾದುಹೋಯಿತು.

ವರನ ಚಪ್ಪರದಲ್ಲಿ ಬಂದ ದಿಬ್ಬಣಿಗರಿಗೆ ಆದರೋಪಚಾರವಾಯಿತು. ಬಾಲೆ ಮಾಡೆದಿ ಮತ್ತು ಸೊರಲಗುತ್ತಿನ ಮಾಡನ ಸೋದರಳಿಯ—ಈ ವಧೂವರರ ವಿವಾಹ ವಿಧಿಯು ಕ್ರಮದಂತೆ ನೆರವೇರಿತು. ಇದ್ದವರಿಗೂ, ದಿಬ್ಬಣಿಗರಿಗೂ ಭೂರಿ ಭೋಜನವಾಯಿತು. ದಿಬ್ಬಣ ಹೊರಳಿತು.

—— (ಸಶೇಷ)

ಸಂಭವಾಮಿ ಯುಗೇ ಯುಗೇ

(ಶ್ರೀ॥ ಎಸ್. ತಿರುಮಲೇಶ್ವರ ಭಟ್, ಮಂಗಳೂರು.)

"ಪರಿತ್ರಾಣಾಯ ಸಾಧೂನಾಂ, ವಿನಾಶಾಯ ಚ ದುಷ್ಕೃತಾಂ ॥ ಧರ್ಮ ಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ ॥" "ಸಜ್ಜನರ ಪರಿಪಾಲನೆಗಾಗಿಯೂ ದುರ್ಜನರ ವಿನಾಶಕ್ಕಾಗಿಯೂ, ಧರ್ಮಸಂಸ್ಥಾಪನೆಗಾಗಿಯೂ ಪ್ರತಿ ಯುಗದಲ್ಲಿ ನಾನು ಹುಟ್ಟುತ್ತೇನೆ" ಇದು ಗೀತಾಚಾರ್ಯನಾದ ಶ್ರೀಕೃಷ್ಣನ ವದನಾರವಿಂದದಿಂದ ಹೊರಹೊಮ್ಮಿದ ದಿವ್ಯವಾಣಿ.

ಲೋಕದಲ್ಲಿ ದುಷ್ಟರು ಹೆಚ್ಚಿ, ಅಧರ್ಮ ಕೃತ್ಯಗಳು ನಡೆದು, ಧರ್ಮವು ನಾಶವಾಗುವಾಗ, ಅವನತಿಹೊಂದಿದ ಧರ್ಮವನ್ನು ಪುನರಪಿಗೊಳಿಸಲು ಪರಮಾತ್ಮನು ಭೂಲೋಕದಲ್ಲಿ ಅವತಾರವೆತ್ತಿರುವುದು ಪುರಾಣಗಳಿಂದ ನಮಗೆ ತಿಳಿದುಬಂದ ವಿಷಯ. ಆಯಾ ಕಾಲದಲ್ಲಿ ಅಧರ್ಮಿಗಳಾದ ದುರುಳ ದಾನವರ ವಿನಾಶಕ್ಕಾಗಿ ಮತ್ಸ್ಯ ಕೂರ್ಮಾದಿ ದಶಾವತಾರಗಳನ್ನು ತಾಳಿದ ಪರಮಾತ್ಮನು ದ್ವಾಪರ ಯುಗದಲ್ಲಿ ಕಂಸ, ಚೈದ್ಯ ಮೊದಲಾದ ದುಷ್ಟರ ನಾಶಕ್ಕಾಗಿ ಶ್ರೀಕೃಷ್ಣಾವತಾರವನ್ನೆತ್ತಿದನು. ಅದು ಅವನ ಎಂಟನೆಯ ಅವತಾರ.

ಶ್ರೀಕೃಷ್ಣಾವತಾರವು ಮಿಕ್ಕ ಅವತಾರಗಳಂತಲ್ಲ; ಪರಿಪೂರ್ಣವಾದುದು. ವಿಚಿತ್ರ ... ಪಾದುದು. ... ಲೀಲೆ, ಶೌರ್ಯ, ದಯೆ, ವೈಭವ, ಸರಳತೆ ಈ ಎಲ್ಲ ಗುಣಗಳಿಂದ ಪರಿಪೂರ್ಣವಾದುದರಿಂದಲೇ ಶ್ರೀಕೃಷ್ಣನ ಜೀವನವು ಪರಿಪೂರ್ಣವಾದುದೂ ಭಕ್ತರ ಬಾಂಧವನಾಗಿ ಅವರ ಇಷ್ಟಾರ್ಥವನ್ನು ಕರುಣಿಸಿದುದಲ್ಲದೆ ಭಾರತೀಯ ದರ್ಶನದ ಸಾರಸರ್ವಸ್ವವೆನಿಸಿದ 'ಭಗವದ್ಗೀತೆ'ಯನ್ನು ದಯಪಾಲಿಸಿದ್ದಾನೆ. ಆದುದರಿಂದಲೇ ಶ್ರೀಕೃಷ್ಣಾವತಾರವು ಜಗತ್ಪ್ರಿಯವಾಗಿ ಪರಿಣಮಿಸಿತು.

ಶ್ರೀಕೃಷ್ಣನು ಮಾನವಸಾಮಾನ್ಯನಲ್ಲ. ಮಾನವಾತೀತನಾಗಿ ಮೆರೆದ ಮಹಾಮಹಿಮ. ಸಂಶಯವನ್ನು ಹೋಗಲಾಡಿಸಿ ಆತ್ಮವಿಶ್ವಾಸದಿಂದ ಧೈರ್ಯ ತಳೆದು ಕರ್ಮನಿರತನಾಗೆಂದು ಶ್ರೀಕೃಷ್ಣನು ಅರ್ಜುನನಿಗೆ ಹೇಳಿದ ಮಾತೇ ಭಾರತದ ಯುದ್ಧದಲ್ಲಿ ಧರ್ಮಕ್ಕೆ ಜಯವನ್ನು ತಂದಿತು. ಶ್ರೀಕೃಷ್ಣನ ದಿವ್ಯ ಸಂದೇಶವೇ ಇಂದಿಗೂ ಭಾರತಕ್ಕೆ ಮಾರ್ಗದರ್ಶನವಾಗಿದೆ. "ಕರ್ಮಣ್ಯೇ ವಾಧಿಕಾರಸ್ತೇ ಮಾ ಫಲೇಷು ಕದಾಚನ" ಕರ್ಮದ ಪ್ರಾಶಸ್ತ್ಯವನ್ನು ಬೋಧಿಸುವ ಶ್ರೀಕೃಷ್ಣನ ಈ ಮಾತು ಭಗವದ್ಗೀತೆಯ ತಿರುಳಾಗಿದೆ.

ಸಂಸಾರಕ್ಕೆ ಹೆದರಿ ನಿಷ್ಕ್ರಿಯನಾಗಿ ಸರ್ವಸಂಗಪರಿತ್ಯಾಗಿಯಾಗಿ ಸನ್ಯಾಸಿಯಾಗುವುದು ಮುಕ್ತಿಗೆ ಮಾರ್ಗವಲ್ಲ. ಕಾಡುಮೇಡುಗಳನ್ನು ಸೇರಿ ಮಾಡುವ ತಪಸ್ಸು ಮುಕ್ತಿಯ ಸೋಪಾನವಲ್ಲ. ನಿಃಸ್ವಾರ್ಥ ಬುದ್ಧಿಯಿಂದ, ಲೋಕಸಂಗ್ರಹದ ಉದ್ದೇಶದಿಂದ ಮಾಡುವ ಕರ್ಮವೇ ಆತ್ಮೋನ್ನತಿಗೆ ಸಾಧನವೆಂದು ಗೀತೆ ಹೇಳುತ್ತಿದೆ. ಕರ್ಮನಿರತನಾದವನು ಕ್ರೂರನಾಗಿದ್ದರೆ, ಸರ್ವದಾ ವಿಶ್ವಾಸಘಾತುಕನಾಗಿದ್ದರೆ ಸ್ವಲ್ಪವೂ ಪಶ್ಚಾತ್ತಾಪಪಡದವನಾಗದಿದ್ದರೆ ಅಂಥವನ ಧರ್ಮಕರ್ಮವಾದರೂ ಅದು ತಕ್ಕಿನದಾಗುವುದು. ಅಂಥವನನ್ನು ಗೀತೆಯು ಮಿಥ್ಯಾಚಾರನೆನ್ನುತ್ತದೆ.

"ನಿಯತಂ ಕುರು ಕರ್ಮ ತ್ವಂ ಕರ್ಮ ಜ್ಯಾಯೋ ಹ್ಯಕರ್ಮಣಃ" ಎಂಬುದಾಗಿ ಕರ್ಮಯೋಗದ ಮಹತ್ವವನ್ನು ಗೀತೆಯ ಇನ್ನೊಂದು ಶ್ಲೋಕವು ಸಾರುತ್ತಿದೆ. ನಿಷ್ಕ್ರಿಯರಾಗಿ ಆಲಸರಾಗಿ ಸೋಮಾರಿಗಳಾಗಿ ಮೋಹಪರವಶರಾಗಿ ಜಡರಾಗಿ ಕುಳಿತಿರುವ ವ್ಯಕ್ತಿಗಳನ್ನು ಈ ಮಾತು ಸಕ್ರಿಯರಾಗುವಂತೆ ಪ್ರೇರೇಪಿಸುತ್ತದೆ. ಶ್ರೀಕೃಷ್ಣನು ಅರ್ಜುನನಿಗೆ ಬೋಧಿಸಿದ ಕರ್ಮಯೋಗವು ಭಾರತದ ನಿಖಿಳ ಜನರಿಗೆ ಎಲ್ಲಾ ಕಾಲಕ್ಕೆ ಅನ್ವಯಿಸುವ ಬೋಧೆಯಾಗಿದೆ.

ನೈತಿಕತೆ ಮತ್ತು ಮಾನವತೆ ಇವೆರಡನ್ನು ಬಿಡದೆ ಸಹಿಷ್ಣುತೆಯಿಂದ ಧರ್ಮಪರ ಕರ್ಮವನ್ನು ಮಾಡುವುದರಿಂದ ಲೋಕಕಲ್ಯಾಣವಾಗುವುದು. ಇದು ಗೀತೆಯ ಸಂದೇಶವಾಗಿದೆ. ಗೀತೆಯು ಬೋಧಿಸುವ ಮಾರ್ಗವು ಕೇವಲ ಒಂದು ವರ್ಗದವರಿಗೆ ಮಾತ್ರ ಅನ್ವಯಿಸುವುದಲ್ಲ; ಅದು ಎಲ್ಲ ಮತೀಯರಿಗೂ ಒಪ್ಪುವ ಮಾರ್ಗ. ಭಗವಾನ್ ಶಂಕರ-ಮಧ್ವ-ರಾಮಾನುಜ ಮೊದಲಾದವರು ಗೀತೆಯನ್ನು ಒಪ್ಪಿದ್ದಾರೆ. ಗೀತೆಯು ಪಾಶ್ಚಾತ್ಯ ರಾಷ್ಟ್ರಗಳಲ್ಲಿಯೂ ಅಲ್ಲಿನ ಭಾಷೆಗಳಲ್ಲಿ ಭಾಷಾಂತರಗೊಂಡು ಭಾರತೀಯ ಆಧ್ಯಾತ್ಮಿಕತೆಯ ಸಂದೇಶವನ್ನು ಸರ್ವತ್ರ ಸಾರಿದೆ. ರಾಮಕೃಷ್ಣ ಪರಮಹಂಸ, ಸ್ವಾಮಿ ವಿವೇಕಾನಂದ, ರಮಣ ಮಹರ್ಷಿ, ಅರವಿಂದ ಯೋಗಿ, ಲೋಕಮಾನ್ಯ ತಿಲಕ, ಮಹಾತ್ಮಾ ಗಾಂಧಿ ಇವರು ಗೀತೆಯಿಂದಲೇ ಪ್ರಭಾವಿತರಾದವರು. ಅಂತಹ ಗೀತೆಯನ್ನೊರೆದ ಗೀತಾಚಾರ್ಯನ ಗೀತೋಪದೇಶದಿಂದ ಪ್ರೇರಿತರಾಗಿ ಕರ್ಮನಿರತರಾಗುವುದರ ಮೂಲಕ ಲೋಕಕಲ್ಯಾಣವನ್ನು ಸಾಧಿಸುವುದು ನಮ್ಮ ಕರ್ತವ್ಯವಾಗಿದೆ.

——

ಆರ್. ವಿ. ಯಸ್. ಸಭಾ (ರಿ) ಮಂಗಳೂರು

ಇವರು ಕಳೆದ ತಾ. 15—8—1962 ರಂದು, ಲಾಲ್ ಭಾಗ್ 'ಪಲ್ಲೆ ಕೃಷ್ಣಾಚಾರ್ ಹಾಲ್'ನಲ್ಲಿ "ಸ್ವಾತಂತ್ರ್ಯ ದಿನೋತ್ಸವ"ವನ್ನು ಜಿಲ್ಲಾಧಿಕಾರಿಗಳಾದ ಶ್ರೀ॥ ಸಿ. ಜೆ. ಪದ್ಮನಾಭರವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ಜರಗಿಸಿದರು. ಪ್ರಾರಂಭದಲ್ಲಿ ಕಾರ್ಯದರ್ಶಿ ಶ್ರೀ॥ ಕೃಷ್ಣಗೋಪಾಲರು ಸಭಾಧ್ಯಕ್ಷರಿಗೆ ಸ್ವಾಗತವನ್ನು ಬಯಸುತ್ತಾ, ಜಿಲ್ಲಾಧಿಕಾರಿಗಳ ಕರ್ತವ್ಯನಿಷ್ಠೆ, ಸಹನೆ, ಆಡಳಿತಾ ದಕ್ಷತೆ ಇವೇ ಮೊದಲಾದ ಉದಾತ್ತ ಗುಣಗಳನ್ನು ಪ್ರಶಂಸಿಸಿ ಜಿಲ್ಲೆಯ ಸುಧಾರಣೆ ಹಾಗೂ ಆಡಳಿತ ರಂಗಗಳಲ್ಲಿ ಅವರ ನಿರಂತರ ಪರಿಶ್ರಮಗಳನ್ನು ಶ್ಲಾಘಿಸಿದರು. ತದನಂತರ ವಿ. ಬಿ. ಸ್ಟೂಡೆಂಟ್ಸ್ ಲಿಟರರಿ ಸೊಸೈಟಿಯ ಪರವಾಗಿ ಕುಮಾರಿ ಜಯಂತಿಯವರು ಒಪ್ಪಿಸಿದ, ಸೊಸೈಟಿ ಸದಸ್ಯ ಶ್ರೀ॥ ಶಂಕರ್ ಎಂಬವರು ಸುಂದರವಾಗಿ ಚಿತ್ರಿಸಿದ ಭಾರತದ ಮಹಾಶಿಲ್ಪಿ ದಿ॥ ವಿಶ್ವೇಶ್ವರಯ್ಯನವರ ಭಾವಚಿತ್ರವನ್ನು ಸಂಘದ ಅಧ್ಯಕ್ಷ ಶ್ರೀ॥ ಯಚ್. ಅನಂತಯ್ಯ, ಬಿ.ಎ.,ಎಲ್.ಟಿ. ಇವರು ಸ್ವೀಕರಿಸಿದರು. ಸಂಘದ ಪ್ರಮುಖ ಕಾರ್ಯಕರ್ತರಲ್ಲೊಬ್ಬರಾದ ಶ್ರೀ॥ ಪಿ. ಬಿ ಆಚಾರ್ ಇವರು ತಮ್ಮ ಸಂಸ್ಥೆ ದಿ ಕೆನರಾ ಜ್ಯುವೆಲ್ಲರ್ಸ್ ಇದರ ಪರವಾಗಿ, ಮಂಗಳೂರಿನಲ್ಲಿರುವ ಸರಕಾರೀ ಮ್ಯೂಸಿಯಂಗೆ ಕಾಣಿಕೆಯಾಗಿ, ಶಿಲ್ಪಕಲೆಯುಳ್ಳ ಬೆಳ್ಳಿಯ ಒಂದು ಲಕ್ಷ್ಮೀ ವಿಗ್ರಹವನ್ನೂ, ಅಲ್ಲದೆ ಅವರು ಶ್ರಮಪಟ್ಟು ಸಂಗ್ರಹಿಸಿದ ಅಪೂರ್ವ ನವರತ್ನದ ದಳಗಳನ್ನೂ ಜಿಲ್ಲಾಧಿಕಾರಿಗಳಿಗೆ ಒಪ್ಪಿಸಿದರು. ಈ ಅಪೂರ್ವ ವಸ್ತುಗಳನ್ನು ಸಂತೋಷದಿಂದ ಸ್ವೀಕರಿಸಿದ ಜಿಲ್ಲಾಧಿಕಾರಿಗಳು, ಈ ಕೊಡುಗೆಯನ್ನು ಪ್ರಶಂಸಿಸಿ, ಮಂಗಳೂರಲ್ಲಿರುವ ಮ್ಯೂಸಿಯಂ ಉತ್ತಮಗೊಂಡು, ಅದು ಸದುಪಯೋಗವಾಗುವುದರಲ್ಲಿ ಎಲ್ಲರೂ ಸಹಕರಿಸಬೇಕೆಂದು ಕೇಳಿಕೊಂಡರು. ಅಲ್ಲದೆ ರಾಷ್ಟ್ರ ನಿರ್ಮಾಣ ಕಾರ್ಯದಲ್ಲಿ ಪ್ರತೀಯೊಬ್ಬ ಪ್ರಜೆಯೂ ತನ್ನ ತನ್ನ ಜವಾಬ್ದಾರಿಕೆಗಳನ್ನರಿತು ಪರಸ್ಪರ ಪ್ರೀತಿಸೌಹಾರ್ದಗಳಿಂದ ಕೂಡಿ ನಡೆದು, ರಾಜ್ಯದಲ್ಲಿ ಸದಾ ಸುಭಿಕ್ಷೆ, ಶಾಂತಿ ಸಂತೋಷಗಳು ನೆಲೆಗೊಳ್ಳುವಂತೆ ದುಡಿಯಬೇಕೆಂದು ಹೇಳಿದರು. ಪಂಚಾಯತ್ ರಾಜ್ಯ ಸ್ಥಾಪನೆಯಿಂದ ಜನತೆಯ ಜವಾಬ್ದಾರಿಕೆ ಹೆಚ್ಚಾಗಿದೆಯೆಂದೂ, ರಾಜ್ಯದ ಆಡಳಿತಾಧಿಕಾರವು ವಿಕೇಂದ್ರೀಕರಣಗೊಂಡು ಜನತೆಯ ಕೈಯಲ್ಲಿಯೇ ಬಂದಿದೆಯೆಂದೂ, ಇದರಿಂದ ತಮಗೆ ಬೇಕಾದಂತಹ ಸಮಾಜ ನಿರ್ಮಾಣ, ಜೀವನಸೌಕರ್ಯಗಳನ್ನು ಮಾಡಿಕೊಳ್ಳಲೂ ಹೆಚ್ಚಿನ ಅವಕಾಶ ಒದಗಿದೆಯೆಂದೂ ವಿವರಿಸಿದರು. ನಮ್ಮ ರಾಷ್ಟ್ರಪ್ರೇಮವು ನಮ್ಮನ್ನೆಲ್ಲ ಒಂದೇ ತಾಯಿಯ ಮಕ್ಕಳು ಎಂಬ ಅಭಿಮಾನಕ್ಕೆ ಒಳಗಾಗುವಂತೆ ಮಾಡಲಿ ಎಂದು ಹಾರೈಸಿದರು.

ಆ ನಂತರ ವಿನೋದಾವಳಿ ಕಾರ್ಯಕ್ರಮದಲ್ಲಿ, ವಿ. ಬಿ. ಸ್ಟೂಡೆಂಟ್ಸ್ ಲಿಟರರಿ ಸೊಸೈಟಿಯವರು "ಸ್ವಾರ್ಥಿ" ಎಂಬ ಕನ್ನಡ ಸಾಮಾಜಿಕ ನಾಟಕವನ್ನು ಯಶಸ್ವಿಯಾಗಿ ಅಭಿನಯಿಸಿದರು.

——

ಪ್ರಾಥಮಿಕ ಆರೋಗ್ಯ ಕೇಂದ್ರ

ಕೇಂದ್ರ ಸರಕಾರ ನಿಯೋಜಿಸಿದ ಪ್ರಕಾರ ಮೈಸೂರು ರಾಜ್ಯಕ್ಕೆ ಮಂಜೂರಾದ 16 ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಒಂದನ್ನು ಉಡುಪಿಯಲ್ಲಿ ಸ್ಥಾಪಿಸಲು ನಿರ್ಣಯಿಸಲಾಗಿದೆ ಎಂದು ತಿಳಿದು ಬರುತ್ತದೆ. —:—

ವಾಚನಾಲಯದ ಉದ್ಘಾಟನೆ

ಚೊಕ್ಕಾಡಿ ಯುವಕ ಮಂಡಲದ ವತಿಯಿಂದ ಕುಕ್ಕುಜಡ್ಕದಲ್ಲಿ ಕಳೆದ ತಾ. 15ರಂದು ವಾಚನಾಲಯವೊಂದು ಪ್ರಾರಂಭವಾಯಿತು. ಶ್ರೀ| ಪದ್ಮನಾಭ ಆಚಾರ್ಯರ ಅಧ್ಯಕ್ಷತೆಯಲ್ಲಿ ಶ್ರೀ| ಪೈಲೂರು ಗೋವಿಂದರವರು ಹೊಸ ವಾಚನಾಲಯವನ್ನು ಉದ್ಘಾಟಿಸಿದರು.

ವಿದಾಯ ಸತ್ಕಾರ

ಮಂಗಳೂರು ನವಭಾರತ ರಾತ್ರಿ ಶಾಲೆಯಿಂದ ನಿವೃತ್ತರಾಗುವ ವಿದ್ವಾನ್ ಶ್ರೀ| ರಾಮಚಂದ್ರ ಪೈ, ಶ್ರೀ| ಸರ್ವೋತ್ತಮ ಕಾಮತ್ ಮತ್ತು ಶ್ರೀ| ಪುರುಷೋತ್ತಮ ರಾವ್ ಈ ಮೂರು ಮಂದಿ ಅಧ್ಯಾಪಕರನ್ನು ಗೌರವಿಸುವ ಸಲುವಾಗಿ ಶಾಲೆಯ ಕರ್ನಾಟಕ ಸಂಘದ ಆಶ್ರಯದಲ್ಲಿ ವಿದಾಯ ಸತ್ಕಾರ ಸಮಾರಂಭವು ಕಳೆದ ತಾ. 18ರಂದು ಶಾಲೆಯ ಕೋಶಾಧ್ಯಕ್ಷೆ ಶ್ರೀಮತಿ ಕಲ್ಯಾಣಿ ಡಿ. ಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಜರಗಿತು.

ಮಂಗಳೂರು ಪೋರ್ಟ್ ಟ್ರಸ್ಟಿಗೆ ನೇಮಕ

ಮಂಗಳೂರು ಪೋರ್ಟ್ ಟ್ರಸ್ಟಿಗೆ ಮಜೂರ ಸಂಘದ ಪ್ರತಿನಿಧಿಯಾಗಿ ಶ್ರೀ| ಡಿ. ಮೋಹನರಾಯರನ್ನು ಮೈಸೂರು ಸರಕಾರ ನೇಮಿಸಿರುವುದೆಂದು ತಿಳಿಯಲಾಗಿದೆ.

ಜೆಮಿನಿ ಗಣೇಶನ್ ಮಂಗಳೂರಲ್ಲಿ

ಪ್ರಖ್ಯಾತ ತಮಿಳು ಸಿನೇಮಾ ನಟ ಶ್ರೀ| ಜೆಮಿನಿ ಗಣೇಶನ್‌ರವರು ಖಾಸಗಿ ಕೆಲಸಕ್ಕಾಗಿ ಉಡುಪಿಗೆ ಬಂದವರು ತಾ. 21ರಂದು ಮಂಗಳೂರಿಗೆ ಬಂದು ವಿಮಾನ ಮೂಲಕ ಮದ್ರಾಸಿಗೆ ಹಿಂದಿರುಗಿದರು. ಸಿಂಡಿಕೇಟ್ ಬೇಂಕಿನ ಹಂಪನಕಟ್ಟಾ ಶಾಖೆಯ ಕಟ್ಟಡದಲ್ಲಿ ಸುಮಾರು ಒಂದು ತಾಸು ಅವರು ತಂಗಿದ್ದಾಗ ನೂರಾರು ಚಲಚ್ಚಿತ್ರ ಪ್ರೇಮಿಗಳು ಅವರ ದರ್ಶನ ಪಡೆದಿದ್ದರು.



ಕೇರಂ ಟೂರ್ನಮೆಂಟ್

ಮಂಗಳೂರು ಕೇಸರಿ ಫ್ರೆಂಡ್ಸ್ ಕ್ಲಬ್ಬಿನ ಆಶ್ರಯದಲ್ಲಿ ಕೇರಂ ಡಬ್ಬಲ್ಸ್ ಟೂರ್ನಮೆಂಟಿನ ಅಂಗವಾಗಿ ನಡೆದ ಫೈನಲ್ ಪಂದ್ಯಾಟದಲ್ಲಿ ಶ್ರೀ| ವಸಂತ ರಾವ್ ಮತ್ತು ವಾಸುದೇವ ಭಟ್‌ರವರು ತಮ್ಮ ಎದುರಾಳಿಗಳಾದ ಶ್ರೀ| ಎಮ್. ರಾಮದಾಸ ಶೆಣೈ ಮತ್ತು ಶ್ರೀ| ರಾಮದಾಸ ಕಾಮತ್‌ರವರನ್ನು ಸೋಲಿಸಿ ಪ್ರಥಮ ಪ್ರಶಸ್ತಿಯನ್ನು ಪಡೆದರು.

ಸಾಹಿತ್ಯ ಸಂಘದ ಉದ್ಘಾಟನೆ

ಮೂಡಬಿದ್ರೆ ಜೈನ್ ಹೈಸ್ಕೂಲಿನ ಸಾಹಿತ್ಯ ಸಂಘದ ಉದ್ಘಾಟನೆಯು ಕಳೆದ ತಾ. 16ರಂದು ಶ್ರೀ| ಟಿ. ರಘು ಚಂದ್ರ ಶೆಟ್ಟರ ಅಧ್ಯಕ್ಷತೆಯಲ್ಲಿ ಶ್ರೀ| ಅಮ್ಮೆಂಬಳ ಶಂಕರನಾರಾಯಣ ನಾವಡರಿಂದ ಜರಗಿತು.

ಹಾ| ಎ| ಶಾಲೆಯಾಗಿ ಪರಿವರ್ತನೆ

ಕುಕ್ಕೆಹಳ್ಳಿ ಬೋರ್ಡ್ ಎಲಿಮೆಂಟರಿ ಶಾಲೆಯು ಹಾಯರ್ ಎಲಿಮೆಂಟರಿ ಶಾಲೆಯಾಗಿ ಪರಿವರ್ತನೆ ಗೊಂಡಿದ್ದು, ಅದರ 6ನೇ ತರಗತಿಯ ಉದ್ಘಾಟನೆಯು ತಾ. 16ರಂದು ಉಡುಪಿಯ ಮಣಿಪಾಲ ಅಕಾಡಮಿ ಆಫ್ ಜನರಲ್ ಎಜ್ಯುಕೇಶನಿನ ರಿಜಿಸ್ಟ್ರಾರ್ ಡಾ| ಟಿ. ಎಂ. ಎ. ಪೈಯವರಿಂದ ನಡೆಯಿತು. ಸಮಾರಂಭದ ಅಧ್ಯಕ್ಷತೆಯನ್ನು ಮೈಸೂರು ವಿಧಾನ ಸಭಾ ಸದಸ್ಯ ಶ್ರೀ| ಎಸ್. ಡಿ. ಸಾಮ್ರಾಜ್ಯರು ವಹಿಸಿದ್ದರು.

ಗುರುದಕ್ಷಿಣಾ ಸಮಾರಂಭ

ಮಂಗಳೂರು ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಆಶ್ರಯದಲ್ಲಿ ಗುರುದಕ್ಷಿಣಾ ಸಮಾರಂಭವು ಕಳೆದ ತಾ. 19ರಂದು ಮುನ್ಸಿಪಲ್ ಕೌನ್ಸಿಲರ್ ಡಾ| ಎಂ. ಸಿ. ಶಾಸ್ತ್ರಿಯವರ ಅಧ್ಯಕ್ಷತೆಯಲ್ಲಿ ಜರಗಿತು.

ಕೆನರಾ ಗರ್ಲ್ಸ್ ಹೈಸ್ಕೂಲಿನ ಹೊಸ ಕಟ್ಟಡದ ಶಂಕುಸ್ಥಾಪನೆ

ಮಂಗಳೂರು ಕೆನರಾ ಗರ್ಲ್ಸ್ ಹೈಸ್ಕೂಲಿನ ಹೊಸ ಕಟ್ಟಡದ ಶಂಕುಸ್ಥಾಪನೆಯು ಕಳೆದ ತಾ. 19ರಂದು ಬೆಳಿಗ್ಗೆ ಜಿಲ್ಲಾ ವಿದ್ಯಾಧಿಕಾರಿ ಶ್ರೀ| ಕೆ. ವಿಟ್ಠಲ ಶೆಣೈಯವರ ಅಧ್ಯಕ್ಷತೆಯಲ್ಲಿ ಶ್ರೀ| ಎಂ. ಅಣ್ಣಪ್ಪ ಕಾಮತರಿಂದ ನಡೆಯಿತು. ಪ್ರಾರಂಭದಲ್ಲಿ ಪ್ರಾರ್ಥನೆಯಾಗಿ ಕೆನರಾ ಹೈಸ್ಕೂಲು ಎಸೋಸಿಯೇಶನಿನ ಉಪಾಧ್ಯಕ್ಷ ಶ್ರೀ|ಯು. ಗೋಪಾಲಕೃಷ್ಣ ನಾಯ್ಕರು ಸ್ವಾಗತ ಭಾಷಣಮಾಡುತ್ತ, ಕೆನರಾ ಹೈಸ್ಕೂಲಿನ ಸರ್ವತೋಮುಖ ಅಭಿವೃದ್ಧಿಯ ವಿವಿಧ ಹಂತಗಳನ್ನು ವಿವರಿಸಿ, 1 ಲಕ್ಷ 30 ಸಾವಿರ ರೂಪಾಯಿ ವೆಚ್ಚದಲ್ಲಿ ನಿರ್ಮಾಣವಾಗಲಿರುವ ಹೊಸ ಶಾಲಾ ಕಟ್ಟಡವು 1963ನೇ ಮೇ ತಿಂಗಳೊಳಗೆ ಪೂರ್ಣವಾಗುವ ನಿರೀಕ್ಷೆಯಿದೆ ಎಂದು ತಿಳಿಸಿದರು. ಶ್ರೀ| ಅಣ್ಣಪ್ಪ ಕಾಮತರು ತಮ್ಮ ಉದ್ಘಾಟನಾ ಭಾಷಣದಲ್ಲಿ ಸ್ತ್ರೀ ವಿದ್ಯಾಭ್ಯಾಸದ ಮಹತ್ವವನ್ನು ವಿವರಿಸುತ್ತ, ಈ ಬಗ್ಗೆ ಭಾರತದಲ್ಲಿ ಪ್ರಾರಂಭದಲ್ಲಿಯೇ ಹೆಚ್ಚಿನ ಆಸಕ್ತಿ ವಹಿಸಿದ ಕೆಲವೇ ಶಾಲೆಗಳ ಪೈಕಿ ಕೆನರಾ ಹೈಸ್ಕೂಲು ಒಂದು ಎಂದು ತಿಳಿಸಿದರು. ಅಧ್ಯಕ್ಷ ಸ್ಥಾನದಿಂದ ಶ್ರೀ| ವಿಟ್ಠಲ ಶೆಣೈಯವರು, ವಿದ್ಯಾಕ್ಷೇತ್ರದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಗಣನೀಯ ಪ್ರಗತಿ ಸಾಧಿಸಿದುದನ್ನು ಉಲ್ಲೇಖಿಸುತ್ತ, ಭಾರತದ ಸ್ತ್ರೀ ವಿದ್ಯಾಭ್ಯಾಸ ಮಟ್ಟದಲ್ಲಿಯೂ ದಕ್ಷಿಣ ಕನ್ನಡ ಜಿಲ್ಲೆಯ ಮಟ್ಟವು ದೇಶದಲ್ಲಿ ಅತ್ಯುನ್ನತವಿದೆ ಎಂದು ಹೇಳಿದರು. ಅಂತ್ಯದಲ್ಲಿ ಶ್ರೀ| ಕೆ. ವಿ. ಕಸ್ತೂರಿಯವರು ಧನ್ಯವಾದಗಳನ್ನರ್ಪಿಸಿದರು.

ಸಂಗೀತ ಕಚೇರಿ

ಕುಂದಾಪುರ ತಾಲೂಕು ಕೊಕ್ಕರ್ಣೆಯವರಾಗಿದ್ದು, ಕಳೆದ ಹಲವಾರು ವರ್ಷಗಳಿಂದ ಮದ್ರಾಸಿನಲ್ಲೇ ನೆಲೆಸಿರುವ ಶ್ರೀ| ಕೆ. ಲಕ್ಷ್ಮೀದಾಸ್‌ರಾವ್ ಇವರ ಸಂಗೀತ ಕಚೇರಿಯೊಂದು ತಾ. 19ನೇ ರವಿವಾರ, ಮಂಗಳೂರು ತಮಿಳು ಸಂಘದ ಆಶ್ರಯದಲ್ಲಿ ಲಾಲ್ ಭಾಗ್ ಪಲ್ಕೆ ಕೃಷ್ಣಾಚಾರ್ ಹೊಲಿನಲ್ಲಿ ಜರಗಿತು.

ಪೋಲೀಸ್ ಅಧಿಕಾರಿಗಳ ಮೇಲೆ ಮಾನನಷ್ಟ ಮೊಕದ್ದಮೆ

ಸುಳ್ಯದ ಸಬ್ ಇನ್ಸಪೆಕ್ಟರರಾಗಿದ್ದು ಈಗ ಬೆಳ್ತಂಗಡಿಗೆ ವರ್ಗಾಯಿಸಲ್ಪಟ್ಟಿರುವ ಶ್ರೀ| ಭೋಜಪ್ಪನವರ ಮೇಲೆ ಉಬರಡ್ಕ ಮಿತ್ತೂರಿನ ತಿಮ್ಮಪ್ಪಯ್ಯ ಭಟ್ ಎಂಬವರು ಪುತ್ತೂರು ಕೋರ್ಟಿನಲ್ಲಿ ಮಾನನಷ್ಟ ಮೊಕದ್ದಮೆ ದಾಖಲು ಮಾಡಿರುವರೆಂದು ತಿಳಿಯಲಾಗಿದೆ.

ಜಿಲ್ಲಾಧಿಕಾರಿಗಳು ಬೆಂಗಳೂರಿಗೆ

ದ. ಕ. ಜಿಲ್ಲೆಯಲ್ಲಿನ ಅಕ್ಕಿ ಪರಿಸ್ಥಿತಿಯ ಕುರಿತು ಮೈಸೂರು ಸರಕಾರದೊಂದಿಗೆ ನಿವೇದಿಸಿಕೊಳ್ಳಲು ಜಿಲ್ಲಾಧಿಕಾರಿ ಶ್ರೀ| ಸಿ. ಜೆ. ಪದ್ಮನಾಭನವರು ಕಳೆದ ತಾ. 21ರಂದು ಬೆಂಗಳೂರಿಗೆ ತೆರಳಿರುವರೆಂದು ತಿಳಿದುಬಂದಿದೆ. ಅವರು ಬೆಂಗಳೂರಿಗೆ ಹೋಗುವ ಹಿಂದಿನ ದಿನ ಶ್ರೀ| ಕೆ. ಸೂರ್ಯನಾರಾಯಣ ಅಡಿಗ (ಕೊಂಗ್ರೆಸ್), ಶ್ರೀ| ಎಂ. ಎಚ್. ಕೃಷ್ಣಪ್ಪ (ಕಮ್ಯೂನಿಸ್ಟ್) ಮೊದಲಾದವರನ್ನೊಳಗೊಂಡ ಶಿಷ್ಟಮಂಡಲವು ಅವರನ್ನು ಭೇಟಿಯಾಗಿ ಜಿಲ್ಲೆಯ ಸಂಕಷ್ಟವನ್ನು ಅವರಲ್ಲಿ ವಿವರಿಸಿದ್ದರು.

ಸ್ತ್ರೀರತ್ನವರರತ್ನಾಢ್ಯೋ
ಸ್ವಸ್ಥಃ ಶೋಕವಿವರ್ಜಿತಃ ।
ಸಂಪನ್ನಧನಭೃತ್ಯಶ್ಚ
ಮರ್ತ್ಯೋ ಲಾಭಗತೇಸಿತೇ॥(ಗರ್ಗ)

ಶ್ರೇಷ್ಠಸ್ತ್ರೀರತ್ನಯುಕ್ತನೂ ರತ್ನಗಳಿಂದ ತುಂಬಿದವನೂ, ಸ್ವಸ್ಥನೂ, ಯಾವ ದುಃಖವೂ ಇಲ್ಲದವನೂ ಧನದಿಂದ ಕೂಡಿದವನೂ, ಕೆಲಸಗಾರರಿಂದ ಕೂಡಿದವನೂ ಏಕಾದಶದಲ್ಲಿ ಶುಕ್ರನಿದ್ದರಾಗುವನು.

ಶುಕ್ರಃ ಕರೋತಿ ಸುಗುಣಂ
ಧನಾಪ್ತಿಂ ಚ ಲಾಭೇ (ವಸಿಷ್ಠ).

ಲಾಭದ ಶುಕ್ರನು ಒಳ್ಳೆಯ ಗುಣ ಧನಲಾಭಗಳನ್ನು ಕೊಡುವನು.

ಲಾಭೇ ಪ್ರಭೂತ ಧನವಾನ್ (ವರಾಹ).

ಲಾಭದ ಶುಕ್ರನು ಹೇರಳ ಸಂಪತ್ತನ್ನು ಕೊಡುವನು.

ಪ್ರತಿರೂಪದಾಸಭೃತ್ಯಂ
ಬಹ್ವಾಯ ಸರ್ವಶೋಕ
ಸಂತ್ಯಕ್ತವತ್ ।
ಜನಯತಿ ಭವ ಭವನಗತೋ
ಭೃಗುತನಯಃ ಸದಾ ಪುರುಷವತ್ ॥
ವೇಶ್ಯಾಸ್ತ್ರೀಸಂಯೋಗೈರ್ಗಮನಾ
ಗಮನಂ ಭವತಿಪುಂಸಾವತ್ ।
ಆಯೇಸಿತೇಪಿ ಚೈವ
ಮುಕ್ತಾರಜತಾದಿ ಭೂಯಿಷ್ಠವತ್ ॥
ನಗರವೃಂದಯೋಗೈಃ
ಸ್ಥಾವರ ಕರ್ಮಭಿರಪಿ ವಿತ್ತವತ್
(ಕಲ್ಯಾಣವರ್ಮ).

ಏಕಾದಶದಲ್ಲಿ ಶುಕ್ರನಿದ್ದರೆ ಚೆಲುವಿನಿಂದ ಕೂಡಿದವನೂ, ದಾಸರಿಂದಲೂ ಭೃತ್ಯವರ್ಗದವರಿಂದ ಕೂಡಿದವನೂ, ತುಂಬಾ ಲಾಭದಿಂದ ಕೂಡಿದವನೂ, ಶೋಕರಹಿತನೂ ಆಗುವನು. ವೇಶ್ಯಾಸ್ತ್ರೀ ಸಂಯೋಗದಿಂದಲೂ, ಸಂಚಾರದ ವ್ಯಾಪಾರ ವೃತ್ತಿಯ ಏಜನ್ಸಿ ವ್ಯವಹಾರ ಮತ್ತು ಮುತ್ತು, ಬೆಳ್ಳಿ ಮೊದಲಾದ ಖನಿಜ ಸಂಪತ್ತುಗಳ ವ್ಯಾಪಾರ ವ್ಯವಹಾರಗಳಿಂದ ತುಂಬಾ ಹಣವುಳ್ಳವನಾಗುವನು. ನಗರ ಗ್ರಾಮಗಳ ಮನೆ, ಇನ್ನಿತರ ಕಟ್ಟಡಗಳ ಕೆಲಸವನ್ನು ವಹಿಸುವುದರಿಂದಲೂ ಧನಲಾಭಗೊಳ್ಳುವನು.

ಏಕಾದಶದ ಶುಕ್ರನ ಫಲ—೩೬

(ಎಂ. ಸುಬ್ರಾಯನ್)

ಏಕಾದಶದ ಶುಕ್ರನ ವಿಷಯದಲ್ಲಿ ವೇಶ್ಯಾಸಂಪರ್ಕದಿಂದ ಧನಲಾಭವಿದೆಯೆಂದು ಕಲ್ಯಾಣವರ್ಮನು ಹೇಳಿದ್ದು ಉಭಯ ರಾಶಿಯ ಶುಕ್ರನಿಗೊಪ್ಪುವುದು. ಏಕಾದಶದ ಉಭಯರಾಶಿಯ ಶುಕ್ರನು ಮೊದಲನೆ ಹೆಂಡತಿಯಿಂದ ಆರ್ಥಿಕಸುಖಕ್ಕೆ ಒಳ್ಳೆಯದನ್ನು ಕೊಡುವುದಿಲ್ಲ. ಎರಡನೆ ವಿವಾಹವಾದೊಡನೆ ಮತ್ತು ಸ್ತ್ರೀಸಂಪರ್ಕ ಅಧಿಕಗೊಂಡಂತೆ ಸಂಪತ್ತಿನ ಬೆಳೆಯುವಿಕೆಗೆ ಅವಕಾಶವನ್ನು ಕೊಡುವನು.

ಲಾಭಸ್ಥೇ ಭೃಗುಜೇ ಸುಖೀ
ಪರವಧೂ ಲೋಲೋಽಟನೋ
ವಿತ್ತವಾನ್ ।
ಸ್ತ್ರೀಜನ ಕಾವ್ಯ ನಾಟಕ ಕಲಾ
ಸಂಗೀತ ವಿದ್ಯಾಧಿಭಿಃ॥(ವೈದ್ಯನಾಥ).

ಏಕಾದಶದಲ್ಲಿ ಶುಕ್ರನಿದ್ದರೆ ಸುಖದಿಂದ ಕೂಡಿದವನೂ, ಪರಸ್ತ್ರೀಲೋಲನೂ ಸಂಚಾರಶೀಲನೂ ಧನಿಕನೂ ಆಗುವನು. ಹೆಂಗುಸರಿಂದಲೂ ಕಾವ್ಯ ಕಲೆ ನಾಟಕ, ಸಂಗೀತ ವಿದ್ಯೆಗಳಿಂದಲೂ ಏಕಾದಶದ ಶುಕ್ರನು ಧನಲಾಭ ಕೊಡುವನು.

ಸದ್ಗೀತ ನೃತ್ಯಾದಿರತೋ ನಿತಾಂತಂ
ನಿತ್ಯಂ ಚ ವಿತ್ತಾಗಮನಾನಿ
ನೂನವತ್
ಸತ್ಕರ್ಮ ಧರ್ಮಾಗಮ ಚಿತ್ತವೃತ್ತಿಃ
ಭೃಗೋಃ ಸುತೋ ಲಾಭಗತೋ
ಯದಿಸ್ಯಾತ್ ॥
(ಬೃಹದ್ಯವನ).

ಏಕಾದಶದ ಶುಕ್ರನು, ಗಾಯನ, ವಾದನ, ನೃತ್ಯಪ್ರೇಮಗಳನ್ನು ಅತಿಯಾಗಿ ಕೊಡುವನು. ಇದರಿಂದ ಸದಾ ಧನದ ಲಾಭವ್ಯಯಗಳುಳ್ಳವನೂ ಎನಿಸುವನು. ಒಳ್ಳೆಯ ಕರ್ಮ, ಧರ್ಮಶಾಸ್ತ್ರ ವಿಚಾರಗಳಲ್ಲಿ ಇರಿಸಿದ ಮನೋವೃತ್ತಿಯುಳ್ಳವನೆನಿಸುವನು.

ಭವ ಭಾವಗತೇ ಭೃಗುನಂದನೇ
ವರಗುಣಾವಹಿತೋಽವ್ಯಸನವ್ರತಃ ।
ಮದನತುಲ್ಯವಪುಃ ಸುಖಭಾಜನಂ
ಭವತಿ ಹಾಸ್ಯರತಿಃ ಪ್ರಿಯದರ್ಶನಃ ॥
(ಆರ್ಯಗ್ರಂಥಕಾರ).

ಶುಕ್ರನು ಏಕಾದಶದಲ್ಲಿದ್ದರೆ ಶ್ರೇಷ್ಠಗುಣಗಳಿಂದ ಕೂಡಿದವನೂ ಅಗ್ನಿಹೋತ್ರಿಯೂ. ಚೆಲುವಾದ ಶರೀರವುಳ್ಳವನೂ ಸುಖಯುಕ್ತನೂ, ಹಾಸ್ಯಾಸಕ್ತನೂ, ದರ್ಶನಯೋಗ್ಯನೂ ಆಗುವನು.

ಬಹುಧನಾಗಮವಾನ್ ಸುಮತಿಃ
ಪುಮಾನ್ನಟನಗೀತವಿದಾಯಗತೇಸಿತೇ
(ಜಯದೇವ).

ಬಹುಧನಾಗಮವುಳ್ಳವನೂ, ಒಳ್ಳೆಯ ಬುದ್ಧಿಯವನೂ, ನಾಟ್ಯ, ಗಾಯನಜ್ಞನೂ ಆಗುವನು.

ಲಾಭೇ ಶುಕ್ರೇ ಸದಾ ಲಾಭೋ
ಯಶ ಸತ್ಯಗುಣಾನ್ವಿತಃ ।
ಧನೀ ಭೋಗಿಕ್ರಿಯಾ ಶುದ್ಧೋ
ಜಾಯತೇ ಮಾನವೋತ್ತಮಃ ॥
(ಕಾಶಿನಾಥ).

ಲಾಭದಲ್ಲಿ ಶುಕ್ರನಿದ್ದರೆ ಯಾವಾಗಲೂ ಧನಲಾಭ ಯಶಸ್ಸು, ಸತ್ಯಗುಣಗಳಿಂದ ಕೂಡಿರುವಿಕೆ, ಕರ್ಮಶುದ್ಧಿ, ಹಣ, ಭೋಗಸುಖ, ಮನುಷ್ಯರಲ್ಲಿ ಹಿರಿತನಗಳುಂಟಾಗುವವು.

ಸದಾ ಗೀತ ನೃತ್ಯಂ ತಸ್ಯಗೇಹೇ
ಸುಕರ್ಮ ಸುಧರ್ಮಾಗಮೇ
ತಸ್ಯ ಚಿತ್ತವತ್ ॥
ದೃಢಂ ವಿದ್ಯಯಾ ಈಶ್ವರೋ ತಸ್ಯಚಿತ್ತೇ
ಯದಾ ಭಾರ್ಗವೋ ಲಾಭ
ಭಾವಂ ಪ್ರಯಾತಃ॥(ಜಾಗೇಶ್ವರ).

ಲಾಭದ ಶುಕ್ರನು ಯಾವಾಗಲೂ ಅವನ ಮನೆಯಲ್ಲಿ ಗೀತ ನೃತ್ಯಗಳನ್ನೂ, ಉತ್ತಮ ಕರ್ಮಗಳನ್ನೂ, ಉತ್ತಮ ಧರ್ಮಶಾಸ್ತ್ರ ವಿಚಾರಗಳಲ್ಲಿ ಮನಸ್ಸನ್ನೂ, ವಿದ್ಯೆಯ ಮೂಲಕ ದೃಢವಾಗಿ ಒಡೆತನದ ವಿಚಾರವನ್ನೂ ಮಾಡುವನು.

ಭೃಗುರ್ಲಾಭ ಗೋಲಾಭದೋಯಸ್ಯ
ಲಗ್ನಾಂತರಂ
ಸುರೂಪಂ ಮಹೀಪಂಚ
ಕುರ್ಯಾಚ್ಚ ಸಮ್ಯಕ್ ।
ಲಸತ್ಕೀರ್ತಿಸತ್ಯಾನುರಕ್ತಂ ಗುಣಾಢ್ಯಂ
ಮಹಾಭೋಗವೈಶ್ವರ್ಯಯುಕ್ತಂ
ಸುಶೀಲವತ್ ॥ (ನಾರಾಯಣ).

ಲಾಭದ ಶುಕ್ರನು ಧನಲಾಭ, ಸತ್ಯವಾದಿಯಾಗಿರುವಿಕೆ, ಗುಣವಂತನಾಗಿರುವಿಕೆ, ಚೆಲು ಆಕೃತಿ, ರಾಜತನ, ಒಳ್ಳೆಯ ಯಶಸ್ಸು, ಮಹಾಭೋಗ ಸಂಪತ್ತಿನ ಸಮೃದ್ಧಿ, ಒಳ್ಳೆಯ ನಡತೆಗಳನ್ನು ಕೊಡುವನು.

[ಸಶೇಷ]

ತಾ. 1—4—1962ರಿಂದ
ಬದಲಾವಣೆಗೊಂಡ

ರೈಲ್ವೇ ಸಮಯ

ಮಂಗಳೂರಿಂದ ಹೊರಡುವ ಬಂಡಿಗಳು

1 ಮಂಗಳೂರು—ಕಣ್ಣಾನೂರು ಪೆಸೆಂಜರ್—ಬೆಳಿಗ್ಗೆ 5-00
2 ಮಂಗಳೂರು—ಮದ್ರಾಸ್ ಮೈಲ್ —ಬೆಳಿಗ್ಗೆ 9-30
3 ಮಂಗಳೂರು—ಕಲ್ಲಿಕೋಟೆ ಪೆಸೆಂಜರ್—ಮಧ್ಯಾಹ್ನ 1-00
4 ಮಂಗಳೂರು—ಕಾಸರಗೋಡು ಪೆಸೆಂಜರ್ —ಸಾಯಂ. 5-30
5 ಮಲಬಾರ್ ಎಕ್ಸ್‌ಪ್ರೆಸ್ —ಸಾಯಂ. 6-50

ಮಂಗಳೂರಿಗೆ ತಲಪುವುದು

1 ಕಣ್ಣಾನೂರು—ಮಂಗಳೂರು ಪೆಸೆಂಜರ್—ಬೆಳಿಗ್ಗೆ 9-20
2 ಮಲಬಾರ್ ಎಕ್ಸ್‌ಪ್ರೆಸ್ —ಬೆಳಿಗ್ಗೆ 11-50
3 ಮದ್ರಾಸ್—ಮಂಗಳೂರು ಮೈಲ್ ಮಧ್ಯಾಹ್ನ 3-45
4 ಕಲ್ಲಿಕೋಟೆ—ಮಂಗಳೂರು ಪೆಸೆಂಜರ್—ಸಾಯಂ. 5-30
5 ಕೊಚ್ಚಿನ್—ಮಂಗಳೂರು ಪೆಸೆಂಜರ್—ರಾತ್ರಿ 10-25

ಈ ವಾರದ ಭವಿಷ್ಯ

ಶ್ರೀ ಎಮ್. ಸುಬ್ರಾಯಮ್,
ಸಾಹಿತ್ಯ ಮತ್ತು ಜೋತಿಷ್ಯ ಶಿರೋಮಣಿ.
ತಾರೀಕು ೨೬—೮—೧೯೬೨ರಿಂದ
ತಾ. ೧—೯—೧೯೬೨.

ಮೇಷ: ಸಾಮುದಾಯಿಕ ವಿಷಯಗಳಲ್ಲಿ ಆಸಕ್ತಿಯು ಬಹಳವಾಗಿರುತ್ತದೆ. ಕುಟುಂಬೀಯರ ಅಗಲುವಿಕೆಯನ್ನು ಹೊಂದಲಿರುವಿರಿ. ಸಂಪತ್ತಿನಿಂದ ಅಭಿವೃದ್ಧಿಗಿರುವ ಸಂಘಟನೆಯು ಕಂಡುಬರುವುದಾಗಿದೆ. ಪ್ರಯಾಣವಾಗಲಿರುವುದು. ನೌಕರರಿಗೆ ಪ್ರಗತಿಯಾಗಲಿದೆ.

ವೃಷಭ: ಕೆಲಸಗಳೆಲ್ಲಾ ಅಪೂರ್ಣವಾಗಿಯೇ ಕಂಡುಬರುವವು. ಹೊಸ ವಿಚಾರಗಳಿಂದ ಕೂಡಿದವರಾಗಿದ್ದು ಅವನ್ನು ಸಾಧಿಸಲಿರುವಿರಿ. ಧಾರ್ಮಿಕ ವಿಷಯಗಳಲ್ಲಿ ಭಾಗವನ್ನು ವಹಿಸಲಿರುವಿರಿ. ರಿಕಾರ್ಡು ವ್ಯವಹಾರಗಳು ಮುಂದುವರಿಯಲಿರುವವು. ವ್ಯಾಪಾರಿಗಳಿಗೆ ಪ್ರಗತಿ ಇದೆ.

ಮಿಥುನ: ಹಲವಾರು ವಿಚಾರಗಳಿಂದ ಕೂಡಿದವರಾಗಿದ್ದು ಅವನ್ನು ಸಾಧಿಸಲಿರುವ ಯತ್ನಯುಕ್ತರಾಗುವಿರಿ. ಕುಟುಂಬದಲ್ಲಿ ಶುಭಕೆಲಸಗಳು ನಡೆಯಲಿರುತ್ತವೆ. ದೇಹಾರೋಗ್ಯ ವಿಷಯದಲ್ಲಿ ಜಾಗರೂಕತೆಯಿಂದ ಕೂಡಿದವರಾಗಬೇಕು. ವ್ಯಾಪಾರಿಗಳಿಗೆ ಪ್ರಗತಿಯಾಗಲಿದೆ.

ಕರ್ಕಟಿಕ: ನಿಮ್ಮವರೇ ನಿಮಗೆ ವಿರೋಧಿಗಳಾಗಿ ಕಂಡುಬರುವರು. ಸಂಪತ್ತಿನಿಂದ ಅಭಿವೃದ್ಧಿಯನ್ನು ಹೊಂದಲಿರುವಿರಿ. ಹಿರಿಯರ ಆರೋಗ್ಯದ ನೆಲೆಯು ಚೆನ್ನಾಗಿರುವುದಿಲ್ಲ. ವಾಸಸ್ಥಾನ ಬದಲಾವಣೆಯನ್ನು ಮಾಡಲಿರುವಿರಿ. ವ್ಯಾಪಾರಿಗಳು ವಾರಾಂತ್ಯದಲ್ಲಿ ಅಭಿವೃದ್ಧಿಗೊಳ್ಳುವರು.

ಸಿಂಹ: ಸಮಾಜದಲ್ಲಿ ಒಳ್ಳೆಯ ಸ್ಥಾನಮಾನಗಳಿಂದ ಕೂಡಿದವರಾಗಿದ್ದು ಯಶಸ್ವಿಗಳಾಗಿ ಕಾಣುವರು. ಮಾನಸಿಕ ಶಾಂತಿಯಿಂದ ಕೂಡಿದವರಾಗುವುದಿಲ್ಲ. ಕುಟುಂಬದ ವಾತಾವರಣವು ಚೆನ್ನಾಗಿರುವುದಿಲ್ಲ. ವಾಸಸ್ಥಾನದ ಬದಲಾವಣೆಗಿರುವ ಸಂಪರ್ಕವಿರುವುದು.

ಕನ್ಯಾ: ಕೆಲಸಗಳೆಲ್ಲಾ ಅಪೂರ್ಣಗಳಾಗಿಯೇ ಕಾಣುವವು. ಆತ್ಮೀಯರ ಸಹಾಯವನ್ನು ಹೊಂದಲಿರುವಿರಿ. ಬಂಧುಜನರ ವಿಯೋಗವಾಗಲಿರುತ್ತದೆ. ದೇಹಾರೋಗ್ಯ ವಿಷಯದಲ್ಲಿ ಜಾಗರೂಕತೆಯಿಂದ ಕೂಡಿದವರಾಗಬೇಕು. ತರುಣತರುಣಿಯರಿಗೆ ದಾಂಪತ್ಯಕ್ಕಿರುವ ಸಂಘಟನೆಯಾಗಲಿರುವುದು.

ತುಲಾ: ಜೀವನದಲ್ಲಿ ನವೀನತೆಗಿರುವ ಸಂಪರ್ಕಯುಕ್ತರಾಗಿ ಕಂಡುಬರುವಿರಿ. ಪುಣ್ಯಕಾರ್ಯಗಳನ್ನು ಮಾಡಲಿರುವಿರಿ. ಪತ್ರವ್ಯವಹಾರಗಳು ಮುಂದುವರಿಯಲಿರುವವು. ಹಿರಿಯರ ಆರೋಗ್ಯದ ನೆಲೆಯು ಚೆನ್ನಾಗಿರುವುದಿಲ್ಲ. ವ್ಯಾಪಾರಿಗಳಿಗೆ ಉನ್ನತಿಯಿದೆ.

ವೃಶ್ಚಿಕ: ನಿಮ್ಮ ಮನಸ್ಸು ಅಶಾಂತಿಯಿಂದ ಕೂಡಿರುತ್ತದೆ. ಮಾನಸಿಕ ಯೋಚನೆಗಳು ಅಧಿಕವಾಗಿರುವುವು. ದೊಡ್ಡ ಮನುಷ್ಯರ ಭೇಟಿ ಮತ್ತು ಸಹಾಯಗಳನ್ನು ಹೊಂದಲಿರುವಿರಿ. ನೌಕರರು ಸ್ಥಾನಾಂತರವನ್ನು ಹೊಂದಲಿರುವ ಯೋಗವಿದೆ.

ಧನು: ಜೀವನರಂಗದಲ್ಲಿ ಅಭಿವೃದಿಗಿರುವ ತಳಹದಿಯು ಕಂಡುಬರುವುದು. ಪುಣ್ಯಕೆಲಸಗಳಲ್ಲಿ ಭಾಗಿಗಳಾಗಿರುವಿರಿ. ಕುಟುಂಬೀಯರ ಅಗಲುವಿಕೆಯನ್ನು ಹೊಂದಲಿರುವ ಯೋಗವಿರುತ್ತದೆ. ಪ್ರಯಾಣವಿದೆ.

ಮಕರ: ಹಲವಾರು ವಿಚಾರಗಳಿಂದ ಕೂಡಿದವರಾಗಿದ್ದು ಅವನ್ನು ಸಾಧಿಸಲಿರುವ ಯತ್ನಯುಕ್ತರಾಗುವಿರಿ. ಕುಟುಂಬದಲ್ಲಿ ಶುಭಕೆಲಸಗಳಿರುತ್ತವೆ. ಸಂಪತ್ತಿನ ಉನ್ನತಿಗಿರುವ ಸಂಘಟನೆಯು ಕಂಡುಬರುವುದು. ವಾಗ್ವಾದಗಳಾಗದಂತೆ ಜಾಗರೂಕರಾಗಿರಿ.

ಕುಂಭ: ಕೈಕೊಂಡ ಕೆಲಸಗಳಲ್ಲಿ ಜಯವಿರುತ್ತದೆ. ಆಕಸ್ಮಿಕ ಘಟನೆಗಳಿಂದ ಕೂಡಿದವರಾಗಿರುವಿರಿ. ಬಂಧುಜನರ ವಿಯೋಗವನ್ನು ಹೊಂದಲಿರುವ ಯೋಗವಿರುತ್ತದೆ. ಪತ್ರವ್ಯವಹಾರಗಳು ಬಹಳವಾಗಿರುವವು.

ಮೀನ: ದೊಡ್ಡ ಮನುಷ್ಯರ ಭೇಟಿ ಮತ್ತು ಸಹಾಯಗಳು ಸಿದ್ಧಿಸಲಿರುವುವು. ಕುಟುಂಬೀಯರ ವಿಯೋಗವಾಗಲಿರುತ್ತದೆ. ಪತ್ರವ್ಯವಹಾರಗಳು ಅಧಿಕವಾಗಿರುವವು. ವ್ಯಾಪಾರಿಗಳಿಗೆ ಪ್ರಗತಿಯುಂಟಾಗಲಿರುವುದು.

— —

ವಾರದ ಪ್ರಭಾತ ಪಂಚಾಂಗ

ಸಿಂಹ, ಶ್ರಾವಣ—ಬಹುಳ

ತಾರೀಕು	ವಾರ	ತಿಥಿ		ನಿತ್ಯ ನಕ್ಷತ್ರ	ಯೋಗ	ಕರಣ	ವಿಷ	ಅಮೃತ	ಮಹಾನಕ್ಷತ್ರ
		ಸೌರ	ಚಾಂದ್ರ						
26	ರವಿ	೧೦	ದ್ವಾ ೫೩	ಪು ೫೦॥	ಸಿ ೭।	ಕೌ ೨೧॥	೧೮॥	೪೪।	ಮಘಾ ೩೯।
27	ಚಂದ್ರ	೧೧	ತ್ರ ೫೬।	ಪು ೫೫॥	ವ್ಯ ೬॥	ಗ ೨೪।॥	೧೨	೩೮	೫೩॥
28	ಕುಜ	೧೨	ಚ ೬೦	ಆ ೬೦	ವರಿ ೬।॥	ಭ ೨೮॥	೩೦॥	೫೬।॥	೪೮
29	ಬುಧ	೧೩	ಚ ।॥	ಆ ೧।	ಪ ೭।॥	ಶ ।॥	೩೪॥	ಅಶೆ ೧॥	೫೨
30	ಗುರು	೧೪	ಅ ೫।॥	ಮ ೭।॥	ಶ ೯॥	ನ ೫।॥	೩೦।	೧-೫೬	೫೬॥
31	ಶುಕ್ರ	೧೫	ಭಾದ್ರಪದ ಶುದ್ಧ ಪಾ ೧೧।॥	ಹು ೧೫	ಸಿ ೧೧॥	ಬ ೧೧॥	೩೫	ಅಶೆ ೧॥	ಹು ೧
1	ಶನಿ	೧೬	ಬಿ ೧೭॥	ಉ ೨೨।	ಸಾ ೧೩।॥	ಕೌ ೧೭॥	೪೬	೨	೫।

ಪ್ರೀತ್ ನ ಜಾನೇ ರೀತ್

ಮೂವಿಸ್ತಾನ್‌ರವರ "ಪ್ರೀತ್ ನ ಜಾನೇ ರೀತ್" ಚಿತ್ರಕ್ಕಾಗಿ ಇತ್ತೀಚೆಗೆ ಜಾನಿವಾಕರ್, ಮೀನೂ ಮುಮ್ತಾಜ್ ಮತ್ತು ಧುಮಾಳ್ ಅಭಿನಯಿಸಿದ ಹಾಸ್ಯದೃಶ್ಯಗಳನ್ನು ಚಿತ್ರೀಕರಿಸಿಕೊಳ್ಳಲಾಯಿತು. ಜಾನಿವಾಕರ್ ಮತ್ತು ಮೀನೂ ಮುಮ್ತಾಜ್ ಹಾಡುವ ದೃಶ್ಯವೂ ಇವುಗಳಲ್ಲೊಂದಾಗಿದೆ. ತಾರಾಗಣದಲ್ಲಿ ಶಮ್ಮಿ ಕಪೂರ್ ಮತ್ತು ಸರೋಜಾದೇವಿ ನಾಯಕ-ನಾಯಿಕೆಯರಾಗಿರುವರು. ಎಚ್. ಕೆ. ರವಿ ನಿರ್ಮಾಪಕರು. ನಿರ್ದೇಶನದ ಜವಾಬ್ದಾರಿಯನ್ನು ಎಸ್. ಬ್ಯಾನರ್ಜಿಯವರು ವಹಿಸಿದ್ದಾರೆ. ಕಲ್ಯಾಣ್ ಜೀ ಆನಂದಜೀಯವರ ಸಂಗೀತವಿದೆ. ಚಿತ್ರವು ಈಗಾಗಲೇ ಏಳು ರೀಲುಗಳಷ್ಟು ಪೂರ್ತಿಗೊಂಡಿದೆ.

●

ಈ ವಾರ
ಮಂಗಳೂರಿನ ಚಿತ್ರಮಂದಿರಗಳಲ್ಲಿ

ಸೆಂಟ್ರಲ್ 23—8—62ರಿಂದ
ಮಾಯಾ
(ಹಿಂದಿ)
ದೇವಾನಂದ್—ಮಾಲಾಸಿನ್ಹಾ—ಆಗಾ.
ದಿನಂಪ್ರತಿ 3 ದೇಖಾವೆಗಳು.

ಜ್ಯೋತಿ 23—8—62ರಿಂದ
ಕಿತ್ತೂರು ಚೆನ್ನಮ್ಮ
(ಕನ್ನಡ)
ರಾಜಕುಮಾರ್—ಬಿ. ಸರೋಜಾದೇವಿ.
ದಿನಂಪ್ರತಿ 3 ದೇಖಾವೆಗಳು.

ರೂಪವಾಣಿ 22—8—62ರಿಂದ
ಟ್ರಂಕ್ ಕಾಲ್
(ಹಿಂದಿ)
ಶ್ಯಾಮಾ - ಅಭಿಭಟ್ಟಾಚಾರ್ಯ — ಪ್ರಾಣ್.
ದಿನಂಪ್ರತಿ 3 ದೇಖಾವೆಗಳು.

ಪ್ರಭಾತ್ 25—8—62ರಿಂದ
ಕಾತ್ತಿರುಂದ ಕಣ್ಗಳ್
(ತಮಿಳು)
ಜೆಮಿನಿ ಗಣೇಶನ್—ಸಾವಿತ್ರಿ.
ದಿನಂಪ್ರತಿ 3 ದೇಖಾವೆಗಳು.

ರಾಮಕಾಂತಿ 24—8—62ರಿಂದ
ರೂಪಲೇಖಾ
(ಹಿಂದಿ)
ಮಹಿಪಾಲ್—ವಿಜಯ ಚೌಧರಿ.
ದಿನಂಪ್ರತಿ 3 ದೇಖಾವೆಗಳು.

BALAJI FROM 24—8—62
THE 39 STEPS
(Eastman Color)
DAILY 3 SHOWS.

ನ್ಯೂ ಚಿತ್ರಾ 23—8—62ರಿಂದ
ಸೀತಾರಾಮ ಕಲ್ಯಾಣ
(ಕನ್ನಡ)
ಎನ್. ಟಿ. ರಾಮರಾವ್, ಬಿ. ಸರೋಜಾದೇವಿ.
ದಿನಂಪ್ರತಿ 3 ದೇಖಾವೆಗಳು.



ರಾಖಿ

ಅಶೋಕ್ ಕುಮಾರ್, ಪ್ರದೀಪ್ ಕುಮಾರ್, ವಹೀದಾ ರೆಹಮಾನ್ ಪ್ರಧಾನ ಪಾತ್ರಗಳಲ್ಲಿರುವ ಪ್ರಭುರಾಮ್ ಪಿಕ್ಚರ್ಸ್‌ರವರ "ರಾಖಿ" ಚಿತ್ರವು ಶೀಘ್ರಗತಿಯಿಂದ ತಯಾರಾಗುತ್ತಿದೆ. ಈ ಚಿತ್ರಕ್ಕಾಗಿ ಪ್ರದೀಪ್ ಕುಮಾರ್ ಮತ್ತು ವಹೀದಾ ರೆಹಮಾನ್ ಹಾಡುವ ಹಾಡೊಂದನ್ನು ಸೇಲಂನ ಬಳಿಯಿರುವ ಅಣೆಕಟ್ಟಿನ ಪ್ರದೇಶದಲ್ಲಿ ಚಿತ್ರೀಕರಿಸಿಕೊಳ್ಳಲಾಗಿದೆ. "ರಾಖಿ" ಚಿತ್ರದಲ್ಲಿ ಪ್ರದೀಪ್ ಕುಮಾರ್ ಮತ್ತು ವಹೀದಾ ರೆಹಮಾನ್ ಪ್ರೇಮಿಗಳ ಪಾತ್ರಗಳಲ್ಲಿದ್ದರೆ, ಅಶೋಕ್ ಕುಮಾರ್ ವಹೀದಾಳ ಸಹೋದರನಾಗಿ ಅಭಿನಯಿಸಿದ್ದಾನೆ.

●

ನಂದಾದೀಪ

ಶ್ರೀ ಭಾರತಿ ಪಿಕ್ಚರ್ಸ್‌ರವರ ಹೊಸ ಕನ್ನಡ ಚಿತ್ರ "ನಂದಾದೀಪ"ಕ್ಕಾಗಿ ಮೂರು ಸೆಟ್ಟುಗಳಲ್ಲಿ ಚಿತ್ರೀಕರಣವು ನಡೆದಿದೆ. ಇದು ಶ್ರೀ ಭಾರತಿ ಪಿಕ್ಚರ್ಸ್‌ರವರ ಪ್ರಥಮ ಚಿತ್ರವಾಗಿದ್ದು, ತಾರಾಗಣದಲ್ಲಿ ರಾಜ್‌ಕುಮಾರ್, ಲೀಲಾವತಿ, ಉದಯಕುಮಾರ್ ಮೊದಲಾದವರಿರುವರು.

●

ತಂದೆ ಮತ್ತು ಮಗ, ತಂದೆ ಮತ್ತು ಮಗನಾಗಿಯೇ ಅಭಿನಯಿಸುತ್ತಾರೆ.

"ಬೇಜುಬಾನ್" ಚಿತ್ರದಲ್ಲಿ ನಿಜ ಜೀವನದಲ್ಲಿ ತಂದೆ-ಮಕ್ಕಳಾದ ಅಶೋಕ್ ಕುಮಾರ್ ಮತ್ತು ಅರೂಪ್‌ಕುಮಾರ್, ಪಿತ-ಪುತ್ರರಾಗಿಯೇ ಪಾತ್ರವಹಿಸಿದ್ದಾರೆ. ಇದು ನಿಜವಾಗಿಯೂ ಅಪೂರ್ವವೇ ಸರಿ! ಅರೂಪ್ ಹೇಳುತ್ತಾನೆ "ತಂದೆಯೊಂದಿಗೆ ಚಿತ್ರಗಳಲ್ಲಿ ಪಾತ್ರವಹಿಸುವುದು ನನ್ನ ದೃಷ್ಟಿಯಲ್ಲಿ ಒಳ್ಳೇ ವಿನೋದವೇ ಸರಿ! ಆದರೆ, ಸದ್ಯ ನನಗೆ ವಿದ್ಯಾರ್ಜನಮಾಡುವ ಇಚ್ಛೆಯೇ ಬಲವಾಗಿದೆ. ನನ್ನ ವಿದ್ಯಾಭ್ಯಾಸ ಮುಗಿದ ಬಳಿಕ ಚಿತ್ರಗಳಲ್ಲಿ ಭಾಗವಹಿಸುವೆ."

●

ಏಪ್ರಿಲ್ ಫೂಲ್!

ಯಶಸ್ವೀ ಚಿತ್ರ ಜಂಗ್ಲಿಯ ನಿರ್ಮಾಪಕರಾದ ಸುಬೋಧ್ ಮುಖರ್ಜಿಯವರು ತಮ್ಮ ಮುಂದಿನ ಚಿತ್ರ ಏಪ್ರಿಲ್ ಫೂಲ್"ಗಾಗಿ ಸಿದ್ಧತೆಗಳನ್ನು ನಡೆಸುತ್ತಿದ್ದಾರೆ. ಚಿತ್ರದ ಸಾಹಿತ್ಯರಚನೆ ಆಗುತ್ತಾ ಇದೆ. ಇನ್ನು ಕೆಲದಿನಗಳಲ್ಲೇ ಸೆಟ್ಟುಗಳ ಮೇಲೆ ಹೋಗಲಿರುವ ಈ ಚಿತ್ರವು ಈಸ್ಟ್‌ಮನ್ ವರ್ಣದಲ್ಲಿ ತಯಾರಾಗುವುದು. ಚಿತ್ರದ ತಾರಾಗಣದಲ್ಲಿ ಬಿಸ್ವಜೀತ್ ಮತ್ತು ಸಾಯಿರಾಬಾನು ಇರುವರು. ಸಂಗೀತವು ಶಂಕರ್ ಜೈಕಿಷನ್‌ರಿಂದ ನಡೆಸಲ್ಪಡುವುದು.

●

ಜನಪ್ರಿಯ ಬಿಸ್ವಜೀತ್

ಹಿಂದಿ ಚಿತ್ರರಂಗದಲ್ಲಿ ಯಶಸ್ವೀ ಚಿತ್ರ 'ಬೀಸ್‌ಸಾಲ್ ಬಾದ್'ನ ಮೂಲಕ ಪದಾರ್ಪಣಮಾಡಿದ ಬಿಸ್ವಜೀತ್ ಈಗ ಮುಂಬಯಿಯಲ್ಲಿ ಅತ್ಯಂತ ಬೇಡಿಕೆಯಿರುವ ನಟನಾಗಿದ್ದಾನೆ. ಈಗಾಗಲೇ ಅವನು ಏಳು ಹಿಂದಿ ಚಿತ್ರಗಳಲ್ಲಿ ಅಭಿನಯಿಸುವ ಕರಾರುಮಾಡಿರುವನು. ಸದ್ಯ ಅವನಿಗೆ ಇನ್ನೂ ಹಲವಾರು ಕರೆಗಳು ಬರಲಿರುವ ಕಾರಣ, ಆತನು ಮುಂಬಯಿಯಲ್ಲಿ ಮನೆಯನ್ನು ಕೊಳ್ಳುವ ನಿರ್ಧಾರವನ್ನೂ ಮಾಡಿರುವನೆಂದು ಸುದ್ದಿ. "ಮುಂಬಯಿಯಲ್ಲಿ ಮನೆಮಾಡಿದ ಮಾತ್ರಕ್ಕೆ ನಾನು ಬಂಗಾಳಿ ಚಿತ್ರಗಳಿಂದ ದೂರವಾದೆನೆಂದು ಭಾವಿಸದಿರಿ. ನಾನು ಈಗಾಗಲೇ ಹಲವಾರು ಬಂಗಾಳಿ ಚಿತ್ರಗಳಲ್ಲಿ ಅಭಿನಯಿಸುತ್ತಲಿದ್ದೇನೆ. ಅವು ಪೂರ್ತಿಗೊಂಡ ಮೇಲೂ ನಾನು ಬಂಗಾಳಿ ಚಿತ್ರಗಳಲ್ಲಿ ಅಭಿನಯಿಸುವುದನ್ನು ತ್ಯಜಿಸಲಾರೆ. ಹಿಂದಿ, ಬಂಗಾಳಿ-ಎರಡರಲ್ಲೂ ಜೊತೆಯಾಗಿಯೇ ನಟಿಸುವೆ." ಎಂದಿರುವನು.

"ಬೀಸ್ ಸಾಲ್ ಬಾದ್" ಚಿತ್ರವು ಬಿಸ್ವಜೀತ್‌ನನ್ನು ಜನಪ್ರಿಯನನ್ನಾಗಿ ಮಾಡಿತಲ್ಲದೆ, ಅವನಿಗೆ ಹಿಂದಿ ಚಿತ್ರರಂಗದಲ್ಲಿ ಒಂದು ಉತ್ತಮ ಸ್ಥಾನವನ್ನು ಕಲ್ಪಿಸಿಕೊಟ್ಟಿತು.

●

ಸೆಹ್ರಾ

ಶಾಂತಾರಾಮರ ಹೊಸಚಿತ್ರ "ಸೆಹ್ರಾ" ಚಿತ್ರೀಕರಣವಾರಂಭವಾಗಿದೆ. ವರ್ಣದಲ್ಲಿ ತಯಾರಾಗುವ ಈ ಚಿತ್ರದಲ್ಲಿ ಸಂಧ್ಯಾ ಮತ್ತು ಪ್ರಶಾಂತ್ ಪ್ರಧಾನ ಪಾತ್ರವರ್ಗದಲ್ಲಿರುವರು. ಪ್ರಶಾಂತನು ಚಿತ್ರರಂಗಕ್ಕೆ ಹೊಸ ನಟನು. ಸುಂದರನೂ, ನೀಳವಾದ ಕೃಶಕಾಯನೂ ಆದ ಪ್ರಶಾಂತನು ಚಿತ್ರಪ್ರೇಮಿಗಳ ಮನಸ್ಸನ್ನು ಸೆರೆಹಿಡಿಯಬಲ್ಲನು. ಚಿತ್ರದ ಇತರ ಪಾತ್ರಗಳಲ್ಲಿ ಮನಮೋಹನ್ ಕೃಷ್ಣ, ಲಲಿತಾ ಪವಾರ್, ಉಲ್ಲಾಸ್, ರಾಜನ್ ಮೊದಲಾದವರಿರುವರು. ಕಲಾ ನಿರ್ದೇಶನವನ್ನು ಕಾನು ದೇಸಾಯಿ ಮತ್ತು ಬಾಬುರಾವ್ ಜಾಧವ್ ವಹಿಸಿರುವರು. ಹಸ್ರತ್ ಜೈಪುರಿ ಗೀತಕಾರರು. ಎಸ್. ಪಿ ರಾಮಲಾಲ್ ಸಂಗೀತವನ್ನು ನೀಡುವರು. ರಾಜಕಮಲ್ ಕಲಾ ಮಂದಿರದಲ್ಲಿ ತಯಾರಾಗುವ ಈ ಚಿತ್ರದ ನಿರ್ಮಾಪಕ-ನಿರ್ದೇಶಕರು ವಿ. ಶಾಂತಾರಾಮ್.

●

ನೃತ್ಯದ ಚಿತ್ರೀಕರಣ

ಜೇಪೀ ಫಿಲಮ್ಸ್‌ರವರು ತಯಾರಿಸುತ್ತಿರುವ "ಮೇರೀ ಸೂರತ್ ತೇರಿ ಆಂಖೆಂ" ಚಿತ್ರಕ್ಕಾಗಿ ಗೋಪಿಕೃಷ್ಣರ ನಿರ್ದೇಶನದಲ್ಲಿ ಆಶಾ ಪರೇಖ್ ಮಾಡುವ ನೃತ್ಯವೊಂದನ್ನು ಚಿತ್ರೀಕರಿಸಿಕೊಳ್ಳಲಾಗಿದೆ. ಮುಂಬಯಿಯ ಶ್ರೀ ಸೌಂಡ್ ಸ್ಟುಡಿಯೋದಲ್ಲಿ ಈ ಚಿತ್ರೀಕರಣವು ನಡೆಯಿತು.

ಚಿತ್ರದ ಪ್ರಧಾನ ಭೂಮಿಕೆಯಲ್ಲಿ ಅಶೋಕ್ ಕುಮಾರ್, ಪ್ರದೀಪ್ ಕುಮಾರ್ ಮತ್ತು ಆಶಾ ಪರೇಖ್ ಇರುವರು. ಶೈಲೇಂದ್ರ ಹಾಡುಗಳನ್ನು ಬರೆದಿರುವರು. ಎಸ್. ಡಿ. ಬರ್ಮನ್ ಸಂಗೀತವನ್ನು ನೀಡಿರುವರು. ನಿರ್ದೇಶಕರು ರಾಖನ್.

●

ದೀವಾನಾ

"ತಲಾಖ್", "ಪ್ಯಾರ್ ಕೀ ಪ್ಯಾಸ್" ಮೊದಲಾದ ಉತ್ತಮ ಕೃತಿಗಳನ್ನು ತೆರೆಗಿಳಿಸಿದ ಮುಂಬಯಿಯ ಅನುಪಮ್ ಚಿತ್ರಾರವರ ಹೊಸ ಚಿತ್ರ "ದೀವಾನಾ" ತಯಾರಾಗುತ್ತಿದೆ.

●

ರಾಜೇಂದ್ರ ಕುಮಾರ್—ಸಾಯಿರಾ ಬಾನು

"ಆಸ್ ಕಾ ಪಂಛಿ" ಚಿತ್ರದ ನಿರ್ಮಾಪಕರಾದ ಜೆ. ಓಂ ಪ್ರಕಾಶ್‌ರವರು ತಮ್ಮ ಎರಡನೇ ಚಿತ್ರವನ್ನು ತಯಾರಿಸುತ್ತಿರುವರು. ಇನ್ನೂ ಚಿತ್ರಕ್ಕೆ ನಾಮಕರಣವಾಗಿಲ್ಲ.

●

ಭಾರತೀಯ ಚಿತ್ರಗಳಿಗೆ ವಿದೇಶೀ ಮಾರುಕಟ್ಟೆ

"ಗಂಗಾ ಜಮುನಾ" ಚಿತ್ರದಿಂದ ನಿರ್ಮಾಪಕರ ಸಾಲಿಗೇರಿರುವ ದಿಲೀಪ್ ಕುಮಾರ್ ಭಾರತೀಯ ಚಿತ್ರಗಳಿಗೆ ವಿದೇಶೀ ಮಾರುಕಟ್ಟೆ ದೊರಕುವುದು ಅಸಾಧ್ಯವಲ್ಲವೆಂದು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ ವಿದೇಶೀಯರಿಗೆ ಭಾರತೀಯ ಚಿತ್ರಗಳಲ್ಲಿ ಆಸಕ್ತಿಯಿದೆಯೆಂದೂ, ಅಮೇರಿಕೆಯ ಸಂಯುಕ್ತ ಸಂಸ್ಥಾನಗಳಲ್ಲಿ ತನ್ನ "ಗಂಗಾ ಜಮುನಾ" ಚಿತ್ರದ ಪ್ರದರ್ಶನದ ಕುರಿತು ತಾನು ಮಾತನಾಡಿದ್ದೇನೆಂದೂ, ಅದು ಫಲಪ್ರದವಾಗುವ ನಂಬಿಕೆ ತನಗಿದೆಯೆಂದೂ ದಿಲೀಪ್ ಹೇಳಿದ್ದಾನೆ.

– K. S. S.

PRABHAT, KANNADA WEEKLY, R. No. BG 418.

Printed at The Prabhat Printers, Ltd., Mangalore and Edited & Published at Prabhat Office, Car Street, Mangalore by K.V.Shenoy.